ಗ್ರಂಥಮಾಲೆ
೪೦೯

ಕುಟುಂಬ ಯೋಜನೆ ಹಾಗೂ ಮೂಢನಂಬಿಕೆಗಳು

ಪ್ರೊ. ಎಸ್. ಎಮ್. ನರಗುಂದ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಏಪ್ರಿಲ್, ೧೯೯೧

ಉಪನ್ಯಾಸ ಗ್ರಂಥಮಾಲೆ

೪೦೯

ಕುಟುಂಬ ಯೋಜನೆ ಹಾಗೂ ಮೂಢನಂಬಿಕೆಗಳು

ಪ್ರೊ. ಎಸ್. ಎಮ್. ನರಗುಂದ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಏಪ್ರಿಲ್, ೧೯೯೧

ಪ್ರಕಾಶಕರು:

ರು. ಮ. ಷಡಕ್ಷರಯ್ಯ
ಕಾರ್ಯನಿರ್ವಾಹಕ ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಏಪ್ರಿಲ್, ೧೯೬೧
೫,೦೦೦ ಪ್ರತಿಗಳು

ಬೆಲೆ : ರೂ. ೧=೦೦

ಮುದ್ರಕರು :

ಜಿ. ಬಿ. ಮನ್ಮಾಚಾರ
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳ ಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ

ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೦೮ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ರಾಮೇಗೌಡ
ಕುಲಪತಿಗಳು

ಅರಿಕೆ

ಪ್ರಸಾರಾಂಗದ ಆಶ್ರಯದಲ್ಲಿ ಗದಗ ತಾಲೂಕಿನ ನಾಗಸಮುದ್ರ ಗ್ರಾಮದಲ್ಲಿ ದಿನಾಂಕ ೨೯–೧೨–೧೯೮೬ ರಂದು ಜರುಗಿದ ೩೬೪ನೆಯ ಉಪನ್ಯಾಸ ಶಿಬಿರದಲ್ಲಿ ನನಗೆ ಪಾಲ್ಗೊಳ್ಳುವ ಅವಕಾಶ ಲಭಿಸಿತ್ತು. 'ಕುಟುಂಬ ಯೋಜನೆ ಹಾಗೂ ಮೂಢ ನಂಬಿಕೆಗಳು' ಎಂಬ ವಿಷಯವನ್ನು ಕುರಿತು ನಾನು ನೀಡಿದ ಉಪನ್ಯಾಸದ ವಿಸ್ತೃತ ರೂಪವೇ ಈ ಕಿರುಹೊತ್ತಿಗೆ. ಇದರಲ್ಲಿ ಜನಸಂಖ್ಯೆ ಬೆಳೆಯಲು ಕಾರಣಗಳು, ಅದರ ಪರಿಣಾಮಗಳು, ಕುಟುಂಬ ಯೋಜನೆ ಅಯಶಸ್ವಿಯಾಗಲು ಮೂಢನಂಬಿಕೆಗಳ ಪಾತ್ರವನ್ನು ವಿವರಿಸಲಾಗಿದೆ. ಇದು ಜನಸಾಮಾನ್ಯರಿಗೂ ಉಪಯೋಗವಾಗಿ ಹೆಚ್ಚಿನ ಪ್ರೇರಣೆಯನ್ನೀಡಿದರೆ ನನ್ನ ಪ್ರಯತ್ನ ಸಾರ್ಥಕವೆಂದು ಭಾವಿಸುವೆ.

ಮೇಲಿನ ವಿಷಯವನ್ನು ಸೂಚಿಸಿ ಉಪನ್ಯಾಸ ನೀಡಲು ಹಾಗೂ ಅದು ಪುಸ್ತಕ ರೂಪದಲ್ಲಿ ಹೊರಬರಲು ಅವಕಾಶ ನೀಡಿದ ವಿಶ್ವವಿದ್ಯಾಲಯದ ಪ್ರಸಾರಾಂಗದ ಆಗಿನ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರಿಗೆ ನಾನು ಚಿರಋಣಿಯಾಗಿದ್ದೇನೆ. ಈ ಲೇಖನವನ್ನು ಸಿದ್ಧಪಡಿಸುವಲ್ಲಿ ನಾನು ಆಕರವಾಗಿ ಬಳಸಿಕೊಂಡ ಗ್ರಂಥಗಳ ಸಂಪಾದಕರಿಗೆ ಲೇಖಕರಿಗೆ ಹಾಗೂ ಗದಗ ರೋಟರಿ

ಸಂಸ್ಥೆಯ ಅಧ್ಯಕ್ಷರಾದ ಡಾ. ಆರ್.ಟಿ. ಕುಲಕರ್ಣಿ ಹಾಗೂ ಕಾರ್ಯದರ್ಶಿಗಳಾದ ಶ್ರೀ ಸಿ.ಎಂ. ಹೊನ್ನಗುಡಿ ಇವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇನ್ನು ನೆರವಾದ ನನ್ನ ಆತ್ಮೀಯರೆಲ್ಲರಿಗೆ ಆಭಾರಿಯಾಗಿದ್ದೇನೆ.

ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ,
ಬಾಗಲಕೋಟ

ಎಸ್. ಎಮ್. ನರಗುಂದ

ಪರಿವಿಡಿ

೧. ಪೀಠಿಕೆ

ಮಾನವ ಸಂಪತ್ತು ಅಥವಾ ಮಾನವ ಶಕ್ತಿ ಎಂಬುದು ಆಯಾ ದೇಶದ ಜನಸಂಖ್ಯೆಯನ್ನು ತಿಳಿಯಪಡಿಸುತ್ತದೆ. ಆದರೆ ನಿಜವಾದ ಅರ್ಥದಲ್ಲಿ ಈ ಮಾನವ ಸಂಪತ್ತು (Human Resources) ದೇಶದ ದುಡಿಯುವ ಜನಸಂಖ್ಯೆಯನ್ನು ಸೂಚಿಸುತ್ತದೆ. ದೇಶದಲ್ಲಿ ದುಡಿಯಲು ಶಕ್ತರಾದ ಜನರು ದೃಢಕಾಯರೂ, ಸಾಮಾನ್ಯ ಶಿಕ್ಷಣವುಳ್ಳವರೂ, ಬುದ್ಧಿವಂತರೂ, ತಾಂತ್ರಿಕ ಜ್ಞಾನವುಳ್ಳವರೂ. ಕುಶಲಕರ್ಮಿಗಳೂ, ಉತ್ಸಾಹಿಗಳೂ ಆಗಿದ್ದಾರೆ. ಮಾನವ ಸಂಪತ್ತು ಬಲಾಢ್ಯವಾಗಿದೆಯೆಂದು ತಿಳಿದುಕೊಳ್ಳಬೇಕು. ಇಂಥ ಮಾನವ ಸಂಪತ್ತಿನಿಂದ ದೇಶದ ಆರ್ಥಿಕಾಭಿವೃದ್ಧಿಯು ತ್ವರಿತವಾಗಿ ಸಾಧ್ಯವಾಗುತ್ತದೆ.

ದೇಶದ ಆರ್ಥಿಕಾಭಿವೃದ್ಧಿ ಮತ್ತು ಮಾನವ ಸಂಪತ್ತುಗಳಲ್ಲಿ ಎರಡು ಪ್ರಕಾರದ ಸಂಬಂಧವಿದೆ. ಒಂದು ರೀತಿಯಿಂದ. ದೇಶದ ಜನರು ಉತ್ಪಾದನಾ ಘಟಕವಾಗಿ ಉತ್ಪಾದನೆಯಲ್ಲಿ ಇತರ ಘಟಕಗಳೊಂದಿಗೆ ಭಾಗವಹಿಸುತ್ತಾರೆ. ಇದರಿಂದ ಜನಸಂಖ್ಯೆ ಅಧಿಕವಿದ್ದಂತೆ ಹೆಚ್ಚು ಜನರು ಉತ್ಪಾದನಾ ಕಾರ್ಯಕ್ಕೆ ಲಭ್ಯವಾಗುತ್ತಾರೆ. ಇದರಿಂದಾಗಿ ಉತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾಗುತ್ತದೆ. ಆದರೆ ಇನ್ನೊಂದು ರೀತಿಯಿಂದ, ಜನರು ಕೇವಲ ಉತ್ಪಾದಕರಾಗಿರದೆ, ಅನುಭೋಗಿಗಳೂ ಆಗಿರುತ್ತಾರೆ. ಇದರಿಂದಾಗಿ, ಜನಸಂಖ್ಯೆ ಹೆಚ್ಚಾದಂತೆ ಅನುಭೋಗಿಗಳೂ

ಹೆಚ್ಚಾಗುವದರಿಂದ ದೇಶದ ಆರ್ಥಿಕ ಪ್ರಗತಿಯು ಕುಂಠಿತವಾಗುತ್ತದೆ. ಹೀಗೆ ದೇಶದ ಜನಸಂಖ್ಯೆಯು ಮಾನವ ಶಕ್ತಿಯಾಗಿ ದೇಶದ ಆರ್ಥಿಕಾಭಿವೃದ್ಧಿಗೆ ಸಹಾಯಕವೂ ಆಗಬಹುದು. ಅಥವಾ ಅನುಭೋಗಗಳಿಗೆ ಆತಂಕವೂ ಆಗಬಹುದು.

ಆರ್ಥಿಕಾಭಿವೃದ್ಧಿಯನ್ನು ಸಾಧಿಸುತ್ತಿರುವ ದೇಶಕ್ಕೆ ದೊಡ್ಡ ಪ್ರಮಾಣದ ಮತ್ತು ಬೆಳೆಯುತ್ತಿರುವ ಜನಸಂಖ್ಯೆಯು ಅನುಕೂಲವಾಗಿದೆಯೆಂದು ಪಲವಾರು ಅರ್ಥಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಆದರೆ ಈ ಅಭಿಪ್ರಾಯ ಮೂರು ಮುಖ್ಯವಾದ ಅಂಶಗಳನ್ನೊಳಗೊಂಡಿರುತ್ತದೆ. ಮೊದಲನೆಯದಾಗಿ. ದೇಶದಲ್ಲಿ ಲಭ್ಯವಿರುವ ಸಂಪನ್ಮೂಲಗಳ ಪ್ರಮಾಣವು ದೇಶದ ಮಾನವ ಸಂಪತ್ತಿನೊಡನೆ ಹೋಲಿಸಿ ನೋಡಿದಾಗ ಅಧಿಕವಾಗಿರಬೇಕು. ಆವಾಗ ಸಂಪನ್ಮೂಲಗಳನ್ನು ಬಳಸಲು ಬೇಕಾಗುವ ಕಾರ್ಮಿಕ ಸಂಖ್ಯೆಯ ಪೂರೈಕೆಯು ಬೇಡಿಕೆಗಿಂತಲೂ ಕಡಿಮೆಯಿರಬೇಕು. ಎರಡನೆಯದಾಗಿ. ದೇಶವು ತನ್ನ ವಿದೇಶಿ ವ್ಯಾಪಾರವನ್ನು ಹೆಚ್ಚಿಸಬೇಕು. ಮೂರನೆಯದಾಗಿ. ದೇಶದ ಜನರು ಕಷ್ಟಪಟ್ಟು ಪ್ರಾಮಾಣಿಕರಾಗಿ ದುಡಿಯುವವರಾಗಬೇಕು. ಈ ಮೂರು ಮೇಲೆ ತಿಳಿಸಿದ ಅಂಶಗಳನ್ನು ಅಚ್ಚುಕಟ್ಟಾಗಿ ಪಾಲಿಸಿದರೆ ಅಭಿವೃದ್ಧಿ ಸಾಧಿಸುವ ದೇಶವು ಬೆಳೆಯುತ್ತಿರುವ ಜನಸಂಖ್ಯೆಯಿಂದ ತೀವ್ರ ಆರ್ಥಿಕಾಭಿವೃದ್ಧಿಯನ್ನು ಸಂಧಿಸಬಹುದು. ಈ ತತ್ವವು ಕೆಲವೊಂದು ಮುಂದುವರೆದ ದೇಶಗಳಾದ ಬ್ರಾಝಿಲ್ ಮತ್ತು ಆಸ್ಟ್ರೇಲಿಯಾ ಇತ್ಯಾದಿ ಕಡಿಮೆ ಜನಸಂಖ್ಯೆ ಹಾಗೂ ಅಧಿಕ ನೈಸರ್ಗಿಕ ಸಂಪತ್ತುಳ್ಳ ದೇಶಗಳಿಗೆ ಮಾತ್ರ ಅನ್ವಯಿಸುತ್ತದೆ. ಆದರೆ ಹಿಂದುಳಿದ ಭಾರತ

ಮುಂತಾದ ದೇಶಗಳಿಗೆ ಇದು ಅನ್ವಯಿಸುವದಿಲ್ಲ. ಏಕೆಂದರೆ, ಭಾರತದಲ್ಲಿ ಜನಸಂಖ್ಯೆಯ ಪ್ರಮಾಣ ಸಾಕಷ್ಟು ಮಿತಿ ಮೀರಿದೆ. ಕಾರ್ಮಿಕರ ಪೂರೈಕೆಯು ಹೆಚ್ಚಿನ ಜನಸಂಖ್ಯೆಯಿಂದಾಗಿ ಬೇಡಿಕೆಗಿಂತಲೂ ಅಧಿಕವಾಗಿದೆ. ಹೀಗಿರುವದರಿಂದ ನಿರುದ್ಯೋಗ ಬೆಳೆಗೊಳ್ಳುತ್ತಿದೆ. ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಅನುಭೋಗ ಅಥವಾ ಬಳಕೆಯ ಪ್ರಮಾಣ ಹೆಚ್ಚಾಗಿ, ಉಳಿತಾಯ ಕಡಿಮೆಯಾಗಿ, ಬಂಡವಾಳ ನಿರ್ಮಾಣ ಮತ್ತು ವಿನಿಯೋಗ ಕಡಿಮೆಯಾಗುವದು. ಬಂಡವಾಳ ಕೊರತೆಯಿಂದ ದೇಶದ ಆರ್ಥಿಕಾಭಿವೃದ್ಧಿಗೆ ಆತಂಕವುಂಟಾಗುವದು. ಮಾನವ ಸಂಪತ್ತಿನಂತೆ ಬಂಡವಾಳವೂ ಉತ್ಪಾದನೆಯಲ್ಲಿ ಪ್ರಮುಖವಾದ ಅಂಶವಾಗಿದೆ. ಆದ್ದರಿಂದ ಭಾರತವು ವಿಪುಲ ನೈಸರ್ಗಿಕ ಸಂಪತ್ತನ್ನು ಮತ್ತು ಮಿತಿಮೀರಿ ಜನಸಂಖ್ಯೆಯನ್ನು ಹೊಂದಿದ್ದರೂ ಬಂಡವಾಳದ ಕೊರತೆಯಿಂದ ಮತ್ತು ಮಾನವ ಶಕ್ತಿಯ ಅದಕ್ಷತೆಯಿಂದಾಗಿ ದೇಶ ಹಿಂದುಳಿಯಲು ಕಾರಣವಾಗಿದೆ.

೨. ಭಾರತದಲ್ಲಿ ಜನಸಂಖ್ಯೆಯ ಬೆಳವಣಿಗೆ

ಭಾರತ ವಿಶಾಲವಾದ ದೇಶ. ಹಳ್ಳಿಗಳ ಬೀಡು. ಶೇಕಡಾ 80 ರಷ್ಟು ಜನ ಹಳ್ಳಿಗರು ಅಶಿಕ್ಷಿತರು. ಅಲ್ಲದೆ ರೂಢಿಗತವಾದ ಹಲವಾರು ನಂಬಿಕೆಗಳ ಅಂಧಕಾರದಲ್ಲಿ ತೊಳಲಾಡುವರು. ಇಂಥವರಿಂದ ತುಂಬಿದ ಈ ದೇಶವು ಎದುರಿಸುತ್ತಿರುವ ಹಲವಾರು ಆರ್ಥಿಕ ಸಾಮಾಜಿಕ ಸಮಸ್ಯೆಗಳಲ್ಲಿ

'ಜನಸಂಖ್ಯೆಯ ಸಮಸ್ಯೆ' ಮುಖ್ಯವಾದ ಮತ್ತು ಜಟಿಲವಾದ ಸಮಸ್ಯೆಯಾಗಿ ಉಳಿದು ಬಂದಿದೆ.

ಜನಸಂಖ್ಯಾ ದೃಷ್ಟಿಯಿಂದ ನಮ್ಮ ದೇಶ ಪ್ರಪಂಚದಲ್ಲಿಯೇ ದ್ವಿತೀಯ ಸ್ಥಾನ ಪಡೆದಿದೆ. (ಚೀನಾ ಪ್ರಥಮ ಸ್ಥಾನ). ಆದರೆ ಭೂ-ವಿಸ್ತೀರ್ಣದ ದೃಷ್ಟಿಯಿಂದ ಏಳನೆಯ ಸ್ಥಾನವನ್ನು ಪಡೆದಿದೆ. ಅದು ಪ್ರಪಂಚದ ಒಟ್ಟು ಭೂ-ಪ್ರದೇಶದ ಶೇಕಡಾ ೨.೩ ರಷ್ಟು ಭಾಗದಲ್ಲಿ ಒಟ್ಟು ಜನಸಂಖ್ಯೆಯ ಶೇಕಡಾ ೧೫ ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಪ್ರತಿವರ್ಷವೂ ಒಂದು ಆಸ್ಟ್ರೇಲಿಯಾ ದೇಶದಷ್ಟು ಜನಸಂಖ್ಯೆ ನಮ್ಮಲ್ಲಿ ಬೆಳೆಯುತ್ತದೆ. ೧೯೮೧ ರಲ್ಲಿ ಭಾರತದ ಜನಸಂಖ್ಯೆಯು ೬೮.೩೮ ಕೋಟಿಯಿತ್ತು. ೧೯೭೧ ರಿಂದ ೧೯೮೧ ರ ವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ ಭಾರತದ ಜನಸಂಖ್ಯೆಯು ೧೩.೬ ಕೋಟಿಗಳಷ್ಟು ಅಧಿಕವಾಯಿತು. ಅಂದರೆ ಪ್ರತಿವರ್ಷ ಒಂದು ಕೋಟಿಗಿಂತಲೂ ಹೆಚ್ಚಿನ ರೀತಿಯಲ್ಲಿ ಬೆಳೆಯುತ್ತದೆ. ಅದರೆ ಬೆಳವಣಿಗೆಯ ಪ್ರಮಾಣ ವರ್ಷಕ್ಕೆ ಶೇಕಡಾ ೨.೪೮. ೧೯೮೪ ರಲ್ಲಿ ಭಾರತದ ಜನಸಂಖ್ಯೆಯು ೭೪ ಕೋಟಿಗಳಿಗೇರಿತು. ಈಗ ಅಂದರೆ ೧೯೮೭ ರಲ್ಲಿ ೭೮ ಕೋಟಿಗಳಿಗೇರುವ ಅಂದಾಜಿದೆ. ಸರ್ ಥೋಮಸ್ ರಾಬರ್ಟ ಮಾಲ್ಥಸ್‌ರ ಅಭಿಪ್ರಾಯದ ಪ್ರಕಾರ ಭಾರತದಂತಹ ಹಿಂದುಳಿದ ದೇಶದಲ್ಲಿ ಜನಸಂಖ್ಯೆಯು ೨೫ ವರ್ಷಕ್ಕೊಮ್ಮೆ ದ್ವಿಗುಣಿತವಾಗಿ ಬೆಳೆಯುತ್ತದೆಯೆಂಬುದು ಸತ್ಯ. ನಮ್ಮ ದೇಶದ ಜನಸಂಖ್ಯೆಯು ಏರಿಕೆಯ ಪ್ರಮಾಣ ಅಧಿಕವಾಗಿದ್ದು. ಪ್ರತಿವರ್ಷ ಶೇ. ೨.೪೮ ರಷ್ಟಿರುತ್ತದೆ. ನಮ್ಮ ದೇಶದಲ್ಲಿ ೧½ ಸೆಕೆಂಡಿನಲ್ಲಿ ಒಂದು ಮಗುವಿನ ಜನನವಾದರೆ ಒಂದು ದಿನದಲ್ಲಿ ೫೫,೦೦೦ ಮಕ್ಕಳ ಜನನ

ವಾಗುವ ಅಂದಾಜಿದೆ. ಇದೇ ರೀತಿ ಜನಸಂಖ್ಯೆ ಬೆಳೆಯುತ್ತ ಹೋದರೆ ಈ ಶತಮಾನ ಮುಗಿಯುವ ವೇಳೆಗೆ (೨೦೦೦) ೧೦೦ ಕೋಟಿ ಆಗಬಹುದೆಂದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ ವಾಗಿದೆ. ಇದಲ್ಲದೆ ನಮ್ಮ ದೇಶದ ಜನಸಂಖ್ಯೆಯು ಮಿತಿಮೀರಿ ಬೆಳೆಯುತ್ತಿರುವದಕ್ಕೆ ಮುಖ್ಯವಾದ ಎರಡು ಕಾರಣಗಳಿವೆ— ಒಂದು ಹೆಚ್ಚಾಗಿರುವ ಜನನ ಪ್ರಮಾಣ, ಇನ್ನೊಂದು ಇಳಿಯುತ್ತಿರುವ ಮರಣ ಪ್ರಮಾಣ.

ಈ ಕೆಳಗಿನ ಪಟ್ಟಿಯಿಂದ ನಮ್ಮ ದೇಶದ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ ಕಂಡು ಬರುತ್ತದೆ.

ಭಾರತದಲ್ಲಿ ಜನಸಂಖ್ಯೆಯ ಬೆಳವಣಿಗೆ (೧೯೦೧-೧೯೮೧):

ವರ್ಷ	ಒಟ್ಟು ಜನಸಂಖ್ಯೆ (ಕೋಟಿಗಳಲ್ಲಿ)	ಹತ್ತು ವರ್ಷಗಳಲ್ಲಿ ಶೇಕಡಾವಾರ ಹೆಚ್ಚಳ	ವಾರ್ಷಿಕ ಹೆಚ್ಚಳ ಶೇಕಡಾವಾರ
೧೯೦೧	೨೩.೬೦	—	—
೧೯೧೧	೨೫.೨೦	+ ೫.೭%	+೦.೫೭%
೧೯೨೧	೨೫.೧೩	— ೦.೩%	—೦.೦೩%
೧೯೩೧	೨೭.೯೦	+೧೧.೦%	+೧.೧೦%
೧೯೪೧	೩೧.೮೬	+೧೪.೨%	+೧.೪೨%
೧೯೫೧	೩೬.೧೧	+೧೩.೩%	+೧.೩೩%
೧೯೬೧	೪೩.೯೧	+೨೧.೫%	+೨.೧೫%
೧೯೭೧	೫೪.೮೨	+೨೪.೮%	+೨.೪೮%
೧೯೮೧	೬೮.೩೮	+೨೪.೮	+೨.೪೮%
೧೯೮೭	೭೮.೦೦	—	+೨.೫೦%

ಈ ಮೇಲಿನ ಪಟ್ಟಿಯಿಂದ ನಮಗೆ ಸ್ಪಷ್ಟವಾಗಿ ತಿಳಿದು ಬರುವದೇನಂದರೆ ಭಾರತವು ಸ್ವಾತಂತ್ರ್ಯ ನಂತರ ಅದರಲ್ಲಿ ಮುಖ್ಯವಾಗಿ ಯೋಜನಾವಧಿಯಲ್ಲಿ ಜನಸಂಖ್ಯೆಯು ಬೆಳವಣಿಗೆಯು ಪ್ರಮಾಣವು ಅಧಿಕವಾಗಿದೆ. ಕಳೆದ ೨೦ ವರ್ಷಗಳ ಅವಧಿಯಲ್ಲಿ ಅಂದರೆ ೧೯೬೧ ರಿಂದ ೧೯೮೧ ರ ವರೆಗೆ ಜನಸಂಖ್ಯೆಯು ಬೆಳವಣಿಗೆಯು ಪ್ರಮಾಣ ಒಂದೇ ರೀತಿಯಾಗಿದೆ. ಆದರೆ ಜನಸಂಖ್ಯೆ ಬೆಳೆದ ಪ್ರಮಾಣ ಇತ್ತರ ದೇಶಗಳಿಗೆ ಹೋಲಿಸಿದ್ದಾದರೆ ನಮ್ಮ ದೇಶದ ಬೆಳವಣಿಗೆಯು ಪ್ರಮಾಣ ಅಧಿಕವಾಗಿದ್ದು, ಇಷ್ಟು ವೇಗದಿಂದ ಬೆಳೆಯುತ್ತಿರುವ ಜನಸಂಖ್ಯೆ ವರವಾಗುವದಕ್ಕೆ ಬದಲು ಶಾಪವೇ ಆಗಿದೆ.

೩. ಭಾರತದಲ್ಲಿ ತೀವ್ರಗತಿಯಲ್ಲಿ ಜನಸಂಖ್ಯೆ ಬೆಳೆಯಲು ಕಾರಣಗಳು

೧. ಜನನ ಮತ್ತು ಮರಣ ಪ್ರಮಾಣ:

ಬೃಹತ್ ಪ್ರಮಾಣದಲ್ಲಿ ಬೆಳೆಯುವ ಜನಸಂಖ್ಯೆಯು ಜನನ ಹಾಗೂ ಮರಣ ಪ್ರಮಾಣಗಳ ಸಂಬಂಧವನ್ನು ಹೊಂದಿರುತ್ತದೆ. ಜನನ ಪ್ರಮಾಣ ಶೇ. ೩.೩೮ ರಷ್ಟು ಹೆಚ್ಚಾಗಿದ್ದು, ಮರಣ ಪ್ರಮಾಣ ಕೇವಲ ಶೇ. ೧.೪ ರಷ್ಟು ಕಡಿಮೆಯಿದೆ. ಭಾರತದಲ್ಲಿಯ ಜನನ ಪ್ರಮಾಣವು ಪ್ರಮಾಣದಲ್ಲಿಯೇ ಹೆಚ್ಚಿರುತ್ತದೆ. ಆದರೆ ಮರಣ ಪ್ರಮಾಣವಲ್ಲಿ ಗಣನೀಯವಾಗಿ ಕಡಿಮೆಯಾಗುತ್ತಾ ಸಾಗಿದೆ. ಯಾಕೆಂದರೆ ಕಳೆದ ೪೦ ವರ್ಷಗಳಲ್ಲಿ ಸಾಕಷ್ಟು

ಉತ್ತಮ ಆಹಾರ, ಶುದ್ಧ ಕುಡಿಯುವ ನೀರಿನ ಪೂರೈಕೆ, ಆಧುನಿಕ ವೈದ್ಯಕೀಯ ಸೌಲಭ್ಯ, ಉತ್ತಮ ಚರಂಡಿ ವ್ಯವಸ್ಥೆ ಮತ್ತು ವಿವಿಧ ರೋಗಗಳ ನಿಯಂತ್ರಣಕ್ಕೆ ಸೂಕ್ತ ಕ್ರಮಗಳ ಸೌಲಭ್ಯಗಳು ಬಹಳಷ್ಟು ಒದಗಿರುವದರಿಂದ ಮರಣ ಪ್ರಮಾಣ ಕಡಿಮೆಯಾಗಿದೆ.

ಆದರೆ ಜನನ ಪ್ರಮಾಣದಲ್ಲಿ ಮಾತ್ರ ಯಾವದೇ ಬದಲಾವಣೆಯಾಗದಿರುವದರಿಂದ ಜನಸಂಖ್ಯೆ ಹೆಚ್ಚುವದಕ್ಕೆ ಸಹಾಯವಾಗಿದೆ.

೧. ಶೀಘ್ರ ಮದುವೆ:

ಶೀಘ್ರ ಮದುವೆ ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಮುಖ್ಯವಾದ ಕಾರಣವಾಗಿದೆ. ಭಾರತದಲ್ಲಿ ಶೇ. ೮೦ ರಷ್ಟು ಸ್ತ್ರೀಯರು ೧೫ ರಿಂದ ೨೦ ವರ್ಷಗಳ ವಯಸ್ಸಿನಲ್ಲಿ ಮದುವೆಯಾಗುತ್ತಾರೆ. ಇದರಿಂದ ಸ್ತ್ರೀಯರ ವೈವಾಹಿಕ ವಯಸ್ಸು ಹೆಚ್ಚಿ ಸಂತಾನೋತ್ಪತ್ತಿಯ ಅವಧಿಯು ಹೆಚ್ಚಿ ಅವರು ಹೆಚ್ಚು ಮಕ್ಕಳನ್ನು ಹೆರುವಂಥವರಾಗುತ್ತಾರೆ. ಇದು ಜನಸಂಖ್ಯೆ ಪ್ರಮಾಣದಲ್ಲಿ ಬೆಳೆಯಲು ಮುಖ್ಯ ಕಾರಣವಾಗಿದೆ.

ಆದರೆ ಶ್ರೀಮಂತ ದೇಶಗಳಲ್ಲಿ ತಡವಾಗಿ ಮದುವೆಯಾಗುವದರಿಂದ ಅವರಲ್ಲಿ ಮಕ್ಕಳನ್ನು ಪಡೆಯುವ ವಯಸ್ಸು ಕಡಿಮೆಯಿದ್ದು, ಆ ದೇಶಗಳಲ್ಲಿ ಕಡಿಮೆ ಜನಸಂಖ್ಯೆಯಿರುವದು ಸಹಜ.

೩. ಕಡ್ಡಾಯ ಮದುವೆ:

ಭಾರತದಲ್ಲಿ ಪ್ರತಿಯೊಬ್ಬ ಸ್ತ್ರೀ ಹಾಗೂ ಪುರುಷರು ತಮ್ಮ ವಯಸ್ಸಿಗೆ ತಕ್ಕಂತೆ ಕಡ್ಡಾಯವಾಗಿ ಮದುವೆಯಾಗಲೇ ಬೇಕು. ಇದು ಭಾರತದ ಹಿಂದೂ ಸಮಾಜದಲ್ಲಿ ಮನೆ ಮಾಡಿ ಕೊಂಡಿರುವ ಒಂದು ಹಳೆಯ ಸಂಪ್ರದಾಯವಾಗಿದೆ. ಇಂಗ್ಲೆಂಡಿನಲ್ಲಿ ೩೫ ವರ್ಷ ವಯಸ್ಸಾದ ೧/೩ ಸ್ತ್ರೀಯರು ವಿವಾಹವಾಗದೇ ಇರುತ್ತಾರೆ. ಆದರೆ ನಮ್ಮ ದೇಶದಲ್ಲಿ ಶೇ. ೭೭ ರಷ್ಟು ಸ್ತ್ರೀಯರು ಮಕ್ಕಳನ್ನು ಪಡೆಯುವ ವಯಸ್ಸಿನಲ್ಲಿ ಮದುವೆಯಾಗುತ್ತಾರೆ. ಇದರಿಂದಾಗಿ, ಭಾರತದಲ್ಲಿ ಸ್ತ್ರೀಯರು ೧೯೭೧ ರ ಜನಗಣತಿಯ ಪ್ರಕಾರ ಸರಾಸರಿ ೬ ರಿಂದ ೮ ಮಕ್ಕಳನ್ನು ಪಡೆಯುವರೆಂದು ಅಂದಾಜು ಮಾಡಲಾಗಿದೆ. ಆದರೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಹೆಚ್ಚು ಸುಶಿಕ್ಷಿತರಿರುವದರಿಂದ ಅವರಲ್ಲಿ ಕಡಿಮೆ ಮಕ್ಕಳನ್ನು ಪಡೆಯುವ ಅಭಿಲಾಷೆ ಹೊಂದಿರುವದರಿಂದ ಸರಾಸರಿ ಕೇವಲ ೪ ರಿಂದ ೫ ಮಕ್ಕಳನ್ನು ಪಡೆಯುವ ಅಂದಾಜಿದೆ.

೪. ಅತೀ ಬಡತನ:

ಭಾರತದಲ್ಲಿ ಶೇ. ೭೦ ರಷ್ಟು ಜನರು ಅತೀ ಬಡವರಾಗಿದ್ದಾರೆ. ಅದಕ್ಕಾಗಿಯೇ " ಎಲ್ಲಿ ಬಡತನವಿರುವದೋ ಅಲ್ಲಿ ಹೆಚ್ಚು ಮಕ್ಕಳು (ಜನಸಂಖ್ಯೆ) ಇರುವವೆಂದು" ಗೋಲ್ಡ್ ಸ್ಮಿತ್‌ರವರು ಅಭಿಪ್ರಾಯಪಟ್ಟಿದ್ದಾರೆ.

೫. ಉಷ್ಣ ಹವಾಮಾನ:

ನಮ್ಮ ದೇಶದ ಹವಾಮಾನವು ಸರ್ವಸಾಮಾನ್ಯವಾಗಿ ವಿಷಮವಾಗಿರುತ್ತದೆ. ಈ ಉಷ್ಣ ಹವಾಮಾನವು ಭಾರತದ

ಸ್ತ್ರೀ ಮತ್ತು ಪುರುಷರ ಶಾರೀರಕ ರಚನೆಯಲ್ಲಿ ಬದಲಾವಣೆ ಯಾಗುವದಲ್ಲದೆ ಅವರು ಬೇಗನೆ ಪ್ರೌಢಾವಸ್ಥೆ (Puberty) ಯನ್ನು ತಲುಪುವರು. ಇದರಿಂದಾಗಿ ಮಕ್ಕಳನ್ನು ಪಡೆಯುವ ವಯಸ್ಸು, ಶೀಘ್ರ ಹಾಗೂ ಹೆಚ್ಚು ಮಕ್ಕಳನ್ನು ಪಡೆಯುವ ಸಾಮರ್ಥ್ಯ ಹೆಚ್ಚಾಗಿರುತ್ತದೆ.

೬. ಸಾಮಾಜಿಕ ಕಾರಣಗಳು :

ನಮ್ಮ ದೇಶದಲ್ಲಿ ಏಕತ್ರ ಕುಟುಂಬ ಪದ್ಧತಿಯಿರುವದರಿಂದ ಅಂತಹ ಕುಟುಂಬದಲ್ಲಿ ಹೆಚ್ಚು ಜನರು ವಾಸಿಸುವದರಿಂದ ಕುಟುಂಬದ ದಂಪತಿಗಳು ಹೆಚ್ಚು ಮಕ್ಕಳನ್ನು ಪಡೆದರೂ ಅವರ ಪಾಲನೆ ಪೋಷಣೆಗಾಗಿ ಚಿಂತಿಸುವದಿಲ್ಲ. ಯಾಕೆಂದರೆ ಕುಟುಂಬದ ಯಜಮಾನ ಎಲ್ಲ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸುವ ಜವಾಬ್ದಾರಿಯನ್ನು ಹೊತ್ತಿರುತ್ತಾನೆ. ಆದ್ದರಿಂದ ಕುಟುಂಬದಲ್ಲಿಯ ಇತರರು ಮಿತವಾದ ಸಂಖ್ಯೆಯಲ್ಲಿ ಮಕ್ಕಳನ್ನು ಪಡೆಯುವ ಬಗ್ಗೆ ಚಿಂತಿಸುವದಿಲ್ಲ. ಮತ್ತು ಮಕ್ಕಳಾಗದ ದಂಪತಿಗಳು ವಿವಾಹವಾಗದ ಸ್ತ್ರೀ–ಪುರುಷರು ಕುಟುಂಬದ ಆರ್ಥಿಕ ಸ್ಥಿತಿಯ ಬಗ್ಗೆ ವಿಚಾರಮಾಡದೆ ಅಲ್ಲಿಗಾಗಿ ಅಲೆದಾಡುವರು.

ಇನ್ನು ಬಹುಪತ್ನಿತ್ವ, ಕಡಿಮೆ ಮರಣ ಪ್ರಮಾಣ, ವೈದ್ಯಕೀಯ ಸೌಲಭ್ಯಗಳು, ವಿಧವಾ ವಿವಾಹ ಇತ್ಯಾದಿಗಳು ಜನಸಂಖ್ಯೆ ತೀವ್ರವಾಗಿ ಬೆಳೆಯಲು ಕಾರಣಗಳಾಗಿವೆ. ಇವುಗಳ ಜೊತೆಗೆ ಇನ್ನಿತರ ಕಾರಣಗಳು ಜನಸಂಖ್ಯೆ ಹೆಚ್ಚಾಗಿರಲು ಸಹಾಯಕವಾಗಿವೆ ಅವು ಇಂತಿವೆ :

೧ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ಹಾಗೂ ಅರೆ–ಉದ್ಯೋಗಗಳಿರುವದರಿಂದ ದೇಶ ಹೆಚ್ಚು ಜನಸಂಖ್ಯೆ ಹೊಂದಿದ ರಾಷ್ಟ್ರವಾಗುವದು.

೨ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ. ವಸತಿ. ಉಡುಪು, ಶಿಕ್ಷಣ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಲ್ಲಿ ದೇಶ ಅಸಮರ್ಥವಾಗಿರಲು ಹೆಚ್ಚು ಜನಸಂಖ್ಯೆಯೇ ಕಾರಣವಾಗಿದೆ.

೩ ನಮ್ಮ ದೇಶದಲ್ಲಿ ಸುಮಾರು ಶೇ. ೫೦ ರಷ್ಟು ಜನರು ಬಡತನದ ರೇಖೆ (Poverty Line) ಯು ಕೆಳಗಿರುವದು ನಿಶ್ಚಿತವಾಗಿ ದೇಶ ಹೆಚ್ಚು ಜನಸಂಖ್ಯೆ ಹೊಂದಿದ್ದು ಕಂಡು ಬರುತ್ತದೆ.

೪ ನಮ್ಮ ದೇಶದಲ್ಲಿ ಕಳೆದ ೪೦ ವರ್ಷಗಳಿಂದ ರಾಷ್ಟ್ರೀಯ ಆದಾಯ ಹೆಚ್ಚಾದರೂ ಹೆಚ್ಚಿನ ಜನಸಂಖ್ಯೆಯಿಂದಾಗಿ ಜನರ ತಲಾದಾಯ ಕಡಿಮೆಯಾಗಿ ದೇಶ ಬಡವಾಗಲು ಕಾರಣವಾಗಿದೆ.

೫ ನಮ್ಮ ದೇಶದಲ್ಲಿ ಬಹುಪಾಲು ಜನರು ಅಶಿಕ್ಷಿತರು ಹಾಗೂ ಮೂಢನಂಬಿಕೆಯುಳ್ಳವರಾಗಿರುವದರಿಂದ ಸರಿಯಾಗಿ ಜನನ ನಿಯಂತ್ರಣದ ವಿಧಾನಗಳನ್ನು ಬಳಸುವದಿಲ್ಲ.

೬ ನಮ್ಮ ದೇಶದ ಬಹು ಭಾಗ ರಾಷ್ಟ್ರೀಯ ಸಂಪತ್ತನ್ನು ಜನಸಂಖ್ಯೆ ತಿಂದು ಹಾಕುವದರಿಂದ ದೇಶ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲಾರದು.

ಇವೆಲ್ಲವುಗಳಿಂದಾಗಿ ನಮ್ಮ ದೇಶದಲ್ಲಿಯ ಎಲ್ಲ ಯೋಜನೆಗಳು ವಿಫಲವಾಗಲು ಕಾರಣವಾಗಿದೆ.

ಮೇಲೆ ತಿಳಿಸಿದ ವಿವಿಧ ಕಾರಣಗಳಿಂದಾಗಿ ತ್ವರಿತ ಗತಿಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ "ಜನಸಂಖ್ಯಾ ಸ್ಫೋಟ" (Population Explosion) ಎಂದು ಕರೆಯುವದು ಔಚಿತ್ಯಪೂರ್ಣವಾದುದು. ಇದಕ್ಕಾಗಿ ಶ್ರೀಮಂತ ರಾಷ್ಟ್ರಗಳ ಅರ್ಥಶಾಸ್ತ್ರಜ್ಞರು ನಮ್ಮ ದೇಶದ ಜನಸಂಖ್ಯೆಯ ಹೆಚ್ಚಳಿಕೆಯನ್ನು ಲಕ್ಷಿಸಿ "ಭಾರತದ ಜನಸಂಖ್ಯೆ ನೊಣಗಳ ಹಾಗೆ ಹುಟ್ಟುತ್ತದೆ. ನೊಣಗಳ ಹಾಗೆ ಸತ್ತು ಹೋಗುತ್ತದೆ." "ಇಲಿಗಳ ಹಾಗೆ ಹುಟ್ಟುತ್ತದೆ, ಇಲಿಗಳ ಹಾಗೆ ಸತ್ತು ಹೋಗುತ್ತದೆ" ಎಂಬುದಾಗಿ ಕೊಟ್ಟ ಹೋಲಿಕೆ ಕೆಳಮಟ್ಟದ್ದೆನಿಸಿದರೂ ಈ ಹೋಲಿಕೆಯು ಹೊಂದಿರುವ ಸತ್ಯ ಮಾತ್ರ ಅಲಕ್ಷಿಸುವಂತಹದಲ್ಲ. ಅದಕ್ಕಾಗಿ ಶ್ರೀಮಾನ್ ಭಗಲಾ ಅವರು ನಮ್ಮ ದೇಶದ ಹೆಚ್ಚಳಿಕೆಯು ಆರ್ಥಿಕಾಭಿವೃದ್ಧಿಗೆ ಯಾವ ರೀತಿಯಾಗಿ ಆತಂಕವನ್ನೊಡ್ಡುವದೆಂಬುದನ್ನು ಈ ರೀತಿಯಾಗಿ ವರ್ಣಿಸಿದ್ದಾರೆ. "ನಾವು ಉಸುಬಿನ ಮೇಲೆ ಬರೆದದ್ದನ್ನು ಸಮುದ್ರದ ಅಲೆಗಳು ಬಂದು ಅಳಿಸಿಕೊಂಡು ಹೋದಂತೆ ನಮ್ಮ ಹೆಚ್ಚಿನ ಜನಸಂಖ್ಯೆ ಎಲ್ಲ ಯೋಜನೆಗಳನ್ನು ವಿಫಲಗೊಳಿಸುತ್ತದೆ" ಎಂದಿದ್ದಾರೆ.

೪. ತೀವ್ರಗತಿಯಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯಿಂದ ಆರ್ಥಿಕಾಭಿವೃದ್ಧಿಯ ಮೇಲಾಗುವ ದುಷ್ಪರಿಣಾಮಗಳು

ಒಂದು ದೇಶದ ಉತ್ಪಾದನೆಯನ್ನು ಹೆಚ್ಚಿಸಲು ಒಂದು ನಿಶ್ಚಿತವಾದ ಜನಸಂಖ್ಯೆಯು ಸಹಾಯವಾಗುವದು. ನಿಶ್ಚಿತವಾದ ಜನಸಂಖ್ಯೆಗಿಂತ ಹೆಚ್ಚಿಗಿದ್ದರೆ ಆ ದೇಶದ ಆರ್ಥಿಕಾಭಿವೃದ್ಧಿ ಕುಂಠಿತವಾಗುವದು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ (ಅಮೇರಿಕಾ. ಇಂಗ್ಲಂಡ ಇತ್ಯಾದಿ) ಜನಸಂಖ್ಯೆ ಕಡಿಮೆ ಇದ್ದು. ಆ ದೇಶಗಳ ನೈಸರ್ಗಿಕ ಸಂಪನ್ಮೂಲಗಳು ಸರಿಯಾದ ರೀತಿಯಲ್ಲಿ ವಿನಿಯೋಗಿಸಲ್ಪಟ್ಟು ದೇಶದ ಉತ್ಪಾದನೆ. ಬೇಡಿಕೆ ಹಾಗೂ ಲಾಭ ಅಧಿಕಗೊಳ್ಳುವವು. ಆದರೆ ನಮ್ಮ ದೇಶದಲ್ಲಿ ಜನಸಂಖ್ಯೆ ತೀವ್ರವಾಗಿ ಬೆಳೆಯುವದರಿಂದ ನೈಸರ್ಗಿಕ ಸಂಪತ್ತುಗಳನ್ನು ಅಜ್ಞಾನ ಹಾಗೂ ತಾಂತ್ರಿಕ ಅಭಾವದಿಂದಾಗಿ ಸರಿಯಾದ ರೀತಿಯಲ್ಲಿ ವಿನಿಯೋಗದಾಗದೆ ಉತ್ಪಾದನೆ. ಬೇಡಿಕೆ. ಲಾಭಗಳಲ್ಲಿ ಕುಗ್ಗಿ ದೇಶ ಅನಭಿವೃದ್ಧಿಯತ್ತ ಸಾಗುವದು. ಆದ್ದರಿಂದ ಹೆಚ್ಚು ಜನಸಂಖ್ಯೆಯು ಆರ್ಥಿಕ ಬೆಳವಣಿಗೆಯ ಮೇಲೆ ಯಾವ ರೀತಿಯಲ್ಲಿ ದುಷ್ಪರಿಣಾಮಗಳನ್ನು ಬೀರುತ್ತದೆಯೆಂಬುವದನ್ನು ಈ ಕೆಳಗಿನ ಅಂಶಗಳಿಂದ ತಿಳಿಯುವಾ.

೧ ರಾಷ್ಟ್ರೀಯಾದಾಯ ಹಾಗೂ ತಲಾ ವರಮಾನಗಳಲ್ಲಿ ಕಡಿಮೆ :

ನಮ್ಮ ದೇಶದ ರಾಷ್ಟ್ರೀಯಾದಾಯವು ಪ್ರತಿಯೊಂದು ಪಂಚವಾರ್ಷಿಕ ಯೋಜನೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಹೆಚ್ಚಾಗಿದೆ. ಆದರೆ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ರಾಷ್ಟ್ರೀಯಾದಾಯದಲ್ಲಿ ಎಷ್ಟೇ ಹೆಚ್ಚಾದರೂ ತಲಾ ವರಮಾನದಲ್ಲಿ ಮಾತ್ರ ಸ್ವಲ್ಪ ಹೆಚ್ಚಳವಾಗಿದೆ. ಪಂಚವಾರ್ಷಿಕ ಯೋಜನೆಗಳ ೩೭ ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯಾದಾಯವು ಪ್ರತಿವರ್ಷ ಶೇ. ೩.೮ ರಷ್ಟು ಹೆಚ್ಚಾಗಿರುತ್ತದೆ. ಆದರೆ ಜನಸಂಖ್ಯೆಯು ಮಿತಿಮೀರಿ ಬೆಳೆಯುವುದರಿಂದ ತಲಾ ಆದಾಯವು ಕೇವಲ ಶೇ. ೧.೫ ರಷ್ಟು ಮಾತ್ರ ಹೆಚ್ಚಾಗಿದ್ದು ಕಂಡು ಬಂದಿದೆ.

೨) ಬಡತನ :

ಭಾರತದಲ್ಲಿ ಜನಸಂಖ್ಯೆ ತೀವ್ರವಾಗಿ ಬೆಳೆಯುವುದರಿಂದ ಬಡತನ ಹೆಚ್ಚಾಗಿ ತೋರುವದು. ಆದರೆ ಒಟ್ಟು ರಾಷ್ಟ್ರೀಯಾದಾಯವು ಹೆಚ್ಚಾದರೆ ಹೆಚ್ಚುತ್ತಿರುವ ಜನಸಂಖ್ಯೆ ತೀವ್ರಗತಿಯಲ್ಲಿರುವದರಿಂದ ಜನರ ತಲಾದಾಯ ಸಾವಕಾಶ ಹೆಚ್ಚಿ ಜನರ ಜೀವನ ಮಟ್ಟ ಕೆಳಮಟ್ಟದ್ದಾಗಿ ಜನರು ಕಡು ಬಡವರಾಗುವದರಿಂದ ಬಡತನ ಹೆಚ್ಚಾಗಿ ಜನನ ಪ್ರಮಾಣಕ್ಕೆ ಎಡೆ ಮಾಡಿ ಕೊಡುವದು.

೩) ನಿರುದ್ಯೋಗ ಹಾಗೂ ಅರೆ–ಉದ್ಯೋಗ :

ಜನಸಂಖ್ಯೆ ಹೆಚ್ಚಾಗಿ ದೇಶದಲ್ಲಿ ನಿರುದ್ಯೋಗ ಹಾಗೂ ಅರೆ–ಉದ್ಯೋಗಗಳು ಹೆಚ್ಚಾಗುವವು. ನಮ್ಮ ದೇಶದಲ್ಲಿ ಪ್ರತಿ

ಯೊಂದು ಪಂಚವಾರ್ಷಿಕ ಯೋಜನೆಗಳಲ್ಲಿ ನಿರುದ್ಯೋಗಿಗಳು ಹೆಚ್ಚಾಗುತ್ತ ಸಾಗಿದ್ದಾರೆ.

೪) ಆಹಾರ ಸಮಸ್ಯೆ :

ನಮ್ಮ ದೇಶದಲ್ಲಿ ಜನಸಂಖ್ಯೆ ತೀವ್ರವಾಗಿ ಬೆಳೆಯುವುದರಿಂದ ಆಹಾರ ಸಮಸ್ಯೆ ಉದ್ಭವಿಸುತ್ತದೆ. ನಮ್ಮ ದೇಶ ಕೃಷಿ ಪ್ರಧಾನವಾದ ದೇಶವಾಗಿದ್ದರೂ ಕೂಡಾ ಇದ್ದ ಜನಸಂಖ್ಯೆಗೆ ಆಹಾರ ಪೂರೈಸುವಲ್ಲಿ ಅಸಮರ್ಥವಾಗಿದೆ. ಯಾಕೆಂದರೆ ಚಿಕ್ಕ ಭೂ-ಹಿಡುವಳಿ, ಹಳೆಯ ಬೇಸಾಯ ಪದ್ಧತಿ. ಹಣಕಾಸು ಅಭಾವ ಇತ್ಯಾದಿಗಳಿಂದಾಗಿ ಕೃಷಿ ಇಳುವರಿ ಕಡಿಮೆಯಾಗಿ ಆಹಾರದ ಕೊರತೆಯಾಗಿ ಇದರ ನಿವಾರಣೆಗೆ ಸರಕಾರ ಪ್ರತಿವರ್ಷ ವಿವಿಧ ದೇಶಗಳಿಂದ ಆಹಾರ ಧಾನ್ಯಗಳನ್ನು ಆಯಾತ ಮಾಡಿ ಕೊಳ್ಳುತ್ತದೆ.

೫) ಹೆಚ್ಚು ಅನುತ್ಪಾದಕ ಬಳಕೆದಾರರು :

ಜನಸಂಖ್ಯೆ ಹೆಚ್ಚಾದಂತೆ ದುಡಿದು ಜೀವಿಸುವವರ ಮೇಲೆ ಭಾರ ಹೆಚ್ಚಾಗುತ್ತದೆ. ನಮ್ಮ ದೇಶದಲ್ಲಿರುವ ಜನಸಂಖ್ಯೆಯನ್ನು ಮುಖ್ಯವಾಗಿ ಎರಡು ಪ್ರಕಾರವಾಗಿ ವಿಂಗಡಿಸಬಹುದು. (೧) ಉತ್ಪಾದಕರು (೨) ಅನುತ್ಪಾದಕರು. ಉತ್ಪಾದಕರೆಂದರೆ ದುಡಿದು ಜೀವನ ಸಾಗಿಸುವವರು. ಅನುತ್ಪಾದಕರೆಂದರೆ ದುಡಿಯದೇ ಜೀವನ ಸಾಗಿಸುವವರು. ೧೫ ರಿಂದ ೫೯ ನೇ ವಯಸ್ಸಿನವರು ಉತ್ಪಾದಕರೆಂದು ಮತ್ತು ೧೫ ವರ್ಷದೊಳಗಿನ ಮತ್ತು ೬೦ ವರ್ಷ ಮೇಲ್ಪಟ್ಟವರು ಅನುತ್ಪಾದಕರೆಂದು ಕರೆಯಲಾಗುವದು.

ಈಗ ನಮ್ಮ ದೇಶದಲ್ಲಿ ಅನುತ್ಪಾದಕರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. ೫೧ ರಷ್ಟಿದೆ. ಹೀಗಾಗಿ ಉತ್ಪಾದಕರು ಅನುತ್ಪಾದಕರಾದ ಚಿಕ್ಕ ಮಕ್ಕಳು. ಮುದುಕರನ್ನು ನೋಡಿಕೊಳ್ಳುವ ಭಾರ ಹೆಚ್ಚಿಗೆ ಬಿದ್ದು, ಉತ್ಪಾದಕರ ದೈಹಿಕ ಹಾಗೂ ಮಾನಸಿಕ ಶ್ರಮವಲ್ಲದೇ ಹಣದ ವೆಚ್ಚ ಹೆಚ್ಚಾಗುತ್ತದೆ.

೬) ಕಾರ್ಮಿಕರ ಅದಕ್ಷತೆ :

ಜನಸಂಖ್ಯೆ ಹೆಚ್ಚಾಗುವದರಿಂದ ಉತ್ಪಾದನೆ ಹೆಚ್ಚಾಗದೆ ಜನರ ತಲಾದಾಯದಲ್ಲಿ ಕಡಿಮೆಯಾಗಿ ಅವರ ಜೀವನ ಮಟ್ಟ ಕುಗ್ಗಿ, ದುಡಿಯುವ ಸಾಮರ್ಥ್ಯ ಕಡಿಮೆಯಾಗುವದು. ದೈಹಿಕವಾಗಿ ಹಾಗೂ ಮಾನಸಿಕವಾಗಿ ಕಾರ್ಮಿಕರು ದಕ್ಷತೆಯಿಂದ ಕೆಲಸ ಮಾಡಲು ಅಸಮರ್ಥರಾಗುವರು. ಬಡತನದ ಬೇಗೆಯಲ್ಲಿ ಬೆಂದು ಕೊನೆಯ ಪಕ್ಷ ಜೀವನಾವಶ್ಯಕ ವಸ್ತುಗಳನ್ನು ಪಡೆಯದೇ ತೊಂದರೆಗೊಳಗಾಗುವರು. ಇದರಿಂದ ಉತ್ಪಾದನೆ ಕಡಿಮೆಯಾಗಿ ದೇಶದ ಆರ್ಥಿಕಾಭಿವೃದ್ಧಿಗೆ ಪೆಟ್ಟು ಬೀಳುವದು.

೭) ಅಧಿಕ ಸಾಮಾಜಿಕ ವೆಚ್ಚ :

ಜನಸಂಖ್ಯೆ ಹೆಚ್ಚಾದಂತೆ ಸಾಮಾಜಿಕ ವೆಚ್ಚವೂ ಹೆಚ್ಚಾಗುತ್ತದೆ. ಇದಲ್ಲದೆ ಜನಸಂಖ್ಯೆ ಏರಿದಂತೆ ಮಕ್ಕಳ ಶಿಕ್ಷಣ. ಉಡುಪು ವಸತಿ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಸರಕಾರ ಒದಗಿಸಿ ಕೊಡಬೇಕಾಗುತ್ತದೆ. ಇವುಗಳಿಗಾಗಿ ಸರಕಾರ ಪಂಚವಾರ್ಷಿಕ ಯೋಜನೆಗಳಲ್ಲಿ ಅಪಾರ ಹಣವನ್ನು ಶಾಲೆ, ಕಾಲೇಜು, ಮನೆ, ಆಸ್ಪತ್ರೆ ಇತ್ಯಾದಿಗಳಿಗಾಗಿ ವೆಚ್ಚ ಮಾಡಬೇಕಾಗುತ್ತದೆ. ಆದರೆ

ಈಗಾಗಲೇ ಭಾರತ ಸರಕಾರ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿ ವದರಿಂದ ಸಾಮಾಜಿಕ ವೆಚ್ಚ ಹೆಚ್ಚು ಮಾಡುವದು ತುಂಬಾ ಕಠಿಣವಾಗುತ್ತದೆ.

೮) ಬಂಡವಾಳ ಶೇಖರಣೆಗೆ ತಡೆ :

ಬಂಡವಾಳದ ಶೇಖರಣೆಯೆಂದರೆ ಉಳಿತಾಯ ಮಾಡಿದ ಹಣವೆಂದು ಹೇಳಬಹುದು. ನಮ್ಮ ದೇಶದಲ್ಲಿ ಜನರ ತಲಾದಾಯ ಕಡಿಮೆಯಿರುವದರಿಂದ ಬಂದ ಆದಾಯವನ್ನು ತಮ್ಮ ಜೀವನಕ್ಕಾಗಿ ವೆಚ್ಚ ಮಾಡಿ ಬಿಡುತ್ತಾರೆ. ಇದರಿಂದ ಉಳಿತಾಯ ಮಾಡುವದು ಸಾಧ್ಯವಾಗುವದಿಲ್ಲ. ಹೀಗೆ ಉಳಿತಾಯ ಕಡಿಮೆಯಿರುವದರಿಂದ ಬಂಡವಾಳ ಶೇಖರಣೆಯು ಪ್ರಮಾಣ ಕಡಿಮೆಯಿರುತ್ತದೆ. ಆದ್ದರಿಂದ ಜನಸಂಖ್ಯೆ ಅತೀ ವೇಗದಲ್ಲಿ ಹೆಚ್ಚಾಗುವದು ಬಂಡವಾಳದ ಶೇಖರಣೆಗೆ ಅಡ್ಡಿಯುಂಟಾಗಿ ಉತ್ಪಾದನೆಯು ಕುಗ್ಗಿ, ಜನರ ಜೀವನ ಮಟ್ಟ ಕಡಿಮೆಯಾಗಿ ಜನರು ಕಡು ಬಡವರಾಗುತ್ತಾರೆ.

೯) ಶ್ರಮದ ನಾಶ :

ಸ್ತ್ರೀಯರು ಹೆಚ್ಚು ಮಕ್ಕಳನ್ನು ಪಡೆಯುವದರಿಂದ ತಮ್ಮ ದೈಹಿಕ ಶಕ್ತಿ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ. ಚಿಕ್ಕ ವಯಸ್ಸಿನಲ್ಲಿಯೇ ಹೆಚ್ಚು ಮಕ್ಕಳನ್ನು ಪಡೆದರೆ ಮತ್ತಷ್ಟು ಶಕ್ತಿ ಹೀನರಾಗುತ್ತಾರೆ. ಇದಲ್ಲದೆ ಸ್ತ್ರೀ ಕಾರ್ಮಿಕರು ಹೆರಿಗೆಯ ಸಮಯದಲ್ಲಿ ಹೆರಿಗೆಯ ಮೊದಲು ಮೂರು ತಿಂಗಳು ನಂತರ ಮೂರು ತಿಂಗಳು ಗೈರುಹಾಜರ್ ತೆಗೆದುಕೊಳ್ಳುವದರಿಂದ

ಶ್ರಮದ ನಾಶವಾಗುವದು ಸಹಜ. ಇದರಿಂದ ದೇಶದ ಉತ್ಪಾದನೆಯು ಕಡಿಮೆಯಾಗುವದು.

(೧೦) ರಾಜಕೀಯ ಅರಾಜಕತೆ :

ತೀವ್ರವಾಗಿ ಹೆಚ್ಚುತ್ತಿರುವ ಜನಸಂಖ್ಯೆಯು ರಾಜಕೀಯ ಅಶಾಂತಿಗೆ ಎಡೆಮಾಡಿಕೊಡುತ್ತದೆ. ಇದಲ್ಲದೆ ಸಾಮಾಜಿಕ ಅನೀತಿಗಳಾದ ಕಳ್ಳತನ, ದರೋಡೆ, ಭ್ರಷ್ಟಾಚಾರ, ಲಂಚಗುಳಿತನ, ದ್ವೇಷ, ರೋಷ, ಅನೀತಿ, ಅಧರ್ಮ, ಅತ್ಯಾಚಾರ ಇತ್ಯಾದಿ ಹೆಚ್ಚಾಗುವದು ಸಹಜ.

(೧೧) ಆರ್ಥಿಕಾಭಿವೃದ್ಧಿಗೆ ಆತಂಕ :

ದೇಶದ ಆರ್ಥಿಕಾಭಿವೃದ್ಧಿಯು ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಕುಂಠಿತವಾಗುತ್ತದೆ. ಆರ್ಥಿಕಾಭಿವೃದ್ಧಿಯೆಂದರೆ ದೇಶದ ಐದು ಆರ್ಥಿಕಾವಲಯಗಳಾದ ಕೃಷಿ, ಕೈಗಾರಿಕೆ, ಖನಿಜ, ಸಾರಿಗೆ–ಸಂಪರ್ಕ, ವಾಣಿಜ್ಯ–ವ್ಯಾಪಾರ ಇವುಗಳ ಅಭಿವೃದ್ಧಿಯೆಂದರ್ಥ. ಆದರೆ ಇವೆಲ್ಲವುಗಳ ಅಭಿವೃದ್ಧಿಯಾಗಬೇಕಾದರೆ ಬಂಡವಾಳ ಅಗತ್ಯ. ಜನಸಂಖ್ಯೆ ಭೀತಾಕಾರವಾಗಿ ಬೆಳೆಯುವದರಿಂದ ಜನರ ಆದಾಯ ಕಡಿಮೆಯಾಗಿ, ಉಳಿತಾಯ ಕಡಿಮೆಯಾಗಿ ಬಂಡವಾಳದ ಕೊರತೆಯಾಗಿ ದೇಶ ಆರ್ಥಿಕ ಪ್ರಗತಿಯನ್ನು ಸಾಧಿಸುವದು ಸಾಧ್ಯವಾಗುವದಿಲ್ಲ.

ಈ ಮೇಲೆ ತಿಳಿಸಿದ ಅಂಶಗಳಿಂದ ಜನಸಂಖ್ಯೆ ಏರಿಕೆಯಿಂದಾಗಿ ದೇಶಕ್ಕೆ ಗಂಡಾಂತರ ಬಂದೊದಗುವದು. ಜನಸಂಖ್ಯೆ

ನಿಯಂತ್ರಿಸದೆ ಆರ್ಥಿಕ ಪ್ರಗತಿ ಸಾಧ್ಯವಿಲ್ಲ. ಇದಕ್ಕಾಗಿ ಭಾರತ ಸರಕಾರ ಕುಟುಂಬಯೋಜನೆ ಮುತ್ತಿತರ ಆಧುನಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ದೇಶ ಪ್ರಗತಿಯತ್ತ ಸಾಗಲು ಪ್ರಯತ್ನಿಸುತ್ತದೆ.

ಭೂತಾಕಾರವಾಗಿ ನಿಂತಿರುವ ಈ ಜನಸಂಖ್ಯೆಯ ಸಮಸ್ಯೆಗೆ ನಮ್ಮ ಅರ್ಥಶಾಸ್ತ್ರಜ್ಞರು ಕಂಡುಕೊಂಡ ಪರಿಹಾರೋಪಾಯಗಳು ಮುಖ್ಯವಾಗಿ ಎರಡು. ಅವು (೧) ವಿವಿಧ ಕ್ಷೇತ್ರಗಳಲ್ಲಿ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸುವದು (೨) ಜನಸಂಖ್ಯೆಯ ನಿಯಂತ್ರಣ.

ಥೋಮಸ್ ಮಾಲ್ಥಸ್‌ರ ಅಭಿಪ್ರಾಯದಂತೆ ಕೃತ್ರಿಮ ತಡೆಗಳಾದ (೧) ಆತ್ಮಸಂಯಮನ ಶಕ್ತಿ
(೨) ತಡವಾಗಿ ಮದುವೆಯಾಗುವದು
(೩) ಮದುವೆಯನ್ನು ಮುಂದೂಡುವದು
(೪) ಮದುವೆಯಾಗದೆಯಿರುವದು
(೫) ಜನನ ನಿಯಂತ್ರಣ

ಇತ್ಯಾದಿ ಇವೆಲ್ಲ ಮನುಷ್ಯ ನಿರೋಧಕ ಶಕ್ತಿಗಳಿಂದ ಜನಸಂಖ್ಯೆಯನ್ನು ನಿಯಂತ್ರಣಗೊಳಿಸಬಹುದು. ಇನ್ನು ನಿಸರ್ಗ ಒಡ್ಡುವ ಪರಿಹಾರಗಳಾದ ಭೂ–ಕಂಪ, ಬರಗಾಲ, ಯುದ್ಧಗಳು ಹಾಗೂ ರೋಗರುಜಿಗಳು ಇತ್ಯಾದಿ. ಇವುಗಳಲ್ಲಿ ಮಾನವನ ನಿಯಂತ್ರಣ ಶಕ್ತಿಗೆ ನಿಲುಕದ ಘಟನೆ ನಡೆಯುವದರಿಂದ ಅವುಗಳನ್ನಿಲ್ಲಿ ಪ್ರಸ್ತಾಪಿಸದೆ ಮನುಷ್ಯ ಸಾಧ್ಯವಾದ ಉಪಾಯಗಳ ಪ್ರಸ್ತಾಪವತ್ತ ಬರಬಹುದು.

ಕುಟುಂಬಯೋಜನೆಯು ಜನಸಂಖ್ಯಾ ನಿಯಂತ್ರಣದ ನೀತಿಗಳಲ್ಲಿ ಒಂದು.

೫. ಕುಟುಂಬ ಯೋಜನೆ

ಕುಟುಂಬ ಯೋಜನೆಯೆಂದರೆ ಕುಟುಂಬದ ಗಾತ್ರವನ್ನು ಚಿಕ್ಕದಾಗಿಡುವಲ್ಲಿ ತಂದೆ ತಾಯಿಗಳು ಹಾಕಿಕೊಂಡಿರುವ ಸ್ವಯಂ ಪ್ರೇರಿತ ನಿರ್ಬಂಧವಾಗಿದ್ದು, ಹುಟ್ಟುವ ಸಂತಾನವನ್ನು ಮಿತಗೊಳಿಸುವದು. ಅದ್ದರಿಂದ ಇದಕ್ಕೆ ಮಿತ ಸಂತಾನವೆಂತಲೂ ಕರೆಯುವರು. ಕುಟುಂಬ ಯೋಜನೆಯು ಜನಸಂಖ್ಯೆಯ ನಿಯಂತ್ರಣಕ್ಕಾಗಿ ಕೈಕೊಳ್ಳಬೇಕಾದ ಒಂದು ಪ್ರಮುಖ ಕ್ರಮವಾಗಿದೆ. "ಸಂತಾನ (ಮಕ್ಕಳು) ನಮ್ಮ ಆಯ್ಕೆಯಾಗಿರಬೇಕು ವಿನಃ ಆಕಸ್ಮಿಕ ಸಂಭವಿಸುವ ಘಟನೆಯಾಗಿರಬಾರದು". "Having the babies by choice and not by chance" ಹೀಗೆ ಜನನ ಪ್ರಮಾಣವನ್ನು ಮಿತಗೊಳಿಸಿ,ಚಿಕ್ಕ ಕುಟುಂಬವನ್ನು ಹೊಂದುವದು ಕುಟುಂಬ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕುಟುಂಬ ಯೋಜನೆಯಿಂದ ತಂದೆ ತಾಯಿಗಳ ಆರೋಗ್ಯವನ್ನು ಕಾಪಾಡುವದರ ಜೊತೆಗೆ ಸುಖೀ ಕುಟುಂಬ ನಿರ್ಮಾಣವಾಗುವದು. ವೈವಾಹಿಕ ಜೀವನದಲ್ಲಿ ಈ ಕುಟುಂಬ ಯೋಜನೆಯು ಸಾಮಾಜಿಕ ಜವಾಬ್ದಾರಿಯನ್ನು ತಂದು ಕೊಡುವದು. ಕುಟುಂಬ ಯೋಜನೆಯಿಂದ ಕುಟುಂಬದ ಸರ್ವಾಂಗೀಣ ಕಲ್ಯಾಣವಾಗುವದರಲ್ಲಿ ಯಾವ ಸಂದೇಹವಿಲ್ಲ. ಭಾರತ ಸರಕಾರವು ೧೯೫೨ ರಲ್ಲಿ ಪ್ರಥಮವಾಗಿ

ಜನಸಂಖ್ಯಾ ನಿಯಂತ್ರಣವನ್ನು ಕುರಿತು ತನ್ನ ನೀತಿಯನ್ನು ಜಾರಿಗೆ ತಂದಿತು. ಇವಕ್ಕೆ ಕುಟುಂಬ ಯೋಜನೆ (Family Planning) ಎಂದು ಕರೆಯಲಾಯಿತು. ಈ ಕುಟುಂಬ ಯೋಜನೆಯನ್ನು ಕಟ್ಟು ನಿಟ್ಟಾಗಿ ಪಾಲಿಸದಿದ್ದರೆ ನಮ್ಮ ಯೋಜನೆಗಳೆಲ್ಲ ಮೋಳೆಯಲ್ಲಿ ಮುಣಸಿ ಹಣ್ಣು ತೊಳೆದಂತೆ ವಿಫಲವಾಗುವದು ಸಹಜ. ಅದಕ್ಕಾಗಿ ಸರಕಾರ ತ್ವರಿತ ಪ್ರಚಾರ ಕೈಕೊಂಡು ಹೆಚ್ಚುತ್ತಿರುವ ಜನಸಂಖ್ಯೆ ಯನ್ನು ಹತೋಟಿಯಲ್ಲಿಡಲು ಪ್ರಯತ್ನಿಸುತ್ತಿದೆ. ಇಲ್ಲದಿದ್ದರೆ ಜನಸಂಖ್ಯೆ ವಿಪರೀತ ಬೆಳೆದು ಭೂಮಿಯ ಮೇಲೆ ವಾಸಿಸಲಾರ ದಷ್ಟು ಜನ ತುಂಬಿ ಬಿಡುವದು.

ಕುಟುಂಬ ಯೋಜನೆಯ ವಿಧಾನಗಳು ಎರಡು ಪ್ರಕಾರ ಗಳಿವೆ.

(ಅ) ಜನನ ನಿಯಂತ್ರಣ ವಿಧಾನಗಳು :

ಸಂತಾನ ಹರಣ ಶಸ್ತ್ರ ಚಿಕಿತ್ಸೆ. ವಂಕಿಧಾರಣೆ (Intra Uterine, Contra ceptives Devices) ಮಾತ್ರೆಗಳ ಸೇವನೆ ನಿರೋಧಗಳ ಬಳಕೆ, ಮತ್ತು ಗರ್ಭಪಾತ ಇವು ಜನನ ನಿಯಂತ್ರ ಣದ ಸಾಧನಗಳಾಗಿವೆ.

(ಬ) ಸ್ವಯಂಪ್ರೇರಿತ ವಿಧಾನಗಳು :

ಬ್ರಹ್ಮಚರ್ಯ ಪಾಲಿಸುವದು. ತಡವಾಗಿ ಮದುವೆಯಾಗು ವದು. ಇಂದ್ರಿಯ ನಿಗ್ರಹ ಪಾಲಿಸುವದು. ಇವು ಸ್ವಯಂ ಪ್ರೇರಿತ ವಿಧಾನಗಳಾಗಿವೆ.

೬. ಕುಟುಂಬ ಯೋಜನೆಯ ಆವಶ್ಯಕತೆ

ನಮ್ಮ ದೇಶದಲ್ಲಿ ಕುಟುಂಬ ಯೋಜನೆಯನ್ನು ಜಾರಿಗೆ ತರುವಲ್ಲಿ ಈ ಕೆಳಗಿನ ಆವಶ್ಯಕತೆಗಳು ಕಾರಣಬರುತ್ತವೆ.

೧ ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸಿ ಜನನ ಪ್ರಮಾಣವನ್ನು ಮಿತಗೊಳಿಸುವದು.

೨ ಜನರ ಆರೋಗ್ಯ ಸುಧಾರಣೆಯ ಜೊತೆಗೆ ಜೀವನಮಟ್ಟವೂ ಸುಧಾರಿಸುವದು.

೩ ಜನಸಂಖ್ಯೆ ಕಡಿಮೆಯಾಗುವದರಿಂದ ಜನರಿಗೆ ಕನಿಷ್ಠ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುವದು.

೪ ಜನಸಂಖ್ಯೆ ಮಿತವಾಗುವದರಿಂದ ಉದ್ಯೋಗಾವಕಾಶಗಳು ಲಭಿಸುವವು.

೫ ಜನಸಂಖ್ಯೆ ಕಡಿಮೆಯಾಗುವದರಿಂದ ಜನರ ತಲಾದಾಯ ಹೆಚ್ಚಾಗಿ, ಉಳಿತಾಯ ಹೆಚ್ಚಿ, ಬಂಡವಾಳ ಶೇಖರಣೆ ಹೆಚ್ಚಾಗಿ ದೇಶದ ಆರ್ಥಿಕ ಪ್ರಗತಿಯಾಗಲು ಸಾಧ್ಯವಾಗುವದು.

೬ ವಿವಾಹಿತ ಸ್ತ್ರೀ ಮತ್ತು ಪುರುಷರಿಗೆ ಸ್ವನಿಯಂತ್ರಣ ವಿಧಾನಗಳನ್ನು ತಿಳಿಸಿಕೊಡುವದರಿಂದ ಜನಸಂಖ್ಯೆಯನ್ನು ಹತೋಟಿಯಲ್ಲಿಡಲು ಸಹಾಯವಾಗುವದು.

ಕುಟುಂಬ ಯೋಜನೆಯನ್ನು ಯಶಸ್ವಿಗೊಳಿಸಲು ಸರಕಾರ ಬಹು ಪ್ರಯತ್ನ ಮಾಡುತ್ತದೆ.

ಅದಕ್ಕಾಗಿ "ಒಂದು ಎರಡು ಬೇಕು. ಮೂರು ಮಕ್ಕಳು ಸಾಕು" 'ಒಂದಕ್ಕೆ ಎಡೆ. ಎರಡಕ್ಕೆ ತಡೆ, ಮೂರಕ್ಕೆ ಕೊನೆ' 'ಒಂದು ಎರಡು ಆಸ್ತಿ (ಮಕ್ಕಳು) ಮಿಕ್ಕಿದ್ದೆಲ್ಲಾ ಜಾಸ್ತಿ'

'ಚಿಕ್ಕ ಸಂಸಾರ ಚೊಕ್ಕ ಸಂಸಾರ
'ಚಿಕ್ಕ ಸಂಸಾರ ಸುಖದ ಸಾಗರ
'ಆರತಿಗೊಬ್ಬ ಮಗಳು. ಕೀರ್ತಿಗೊಬ್ಬ ಮಗ

ಎಂಬೆಲ್ಲ ಘೋಷಣೆಗಳು ನಮ್ಮೆಲ್ಲರ ಕಿವಿಯನ್ನು ತಟ್ಟು ವಂತಾಗಿವೆ.

ಅವರಂತೆ ಪ್ರತಿಯೊಂದು ಪಂಚವಾರ್ಷಿಕ ಯೋಜನೆಗಳಲ್ಲಿ ಅಪಾರ ಹಣವನ್ನು ಕುಟುಂಬ ಯೋಜನೆಗಾಗಿ ಮಾಡಿದ್ದು ಈ ಕೆಳಗಿನಂತೆ ಕಂಡು ಬರುತ್ತದೆ.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೬೫ ಲಕ್ಷ ರೂ.ಗಳು.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೨.೧೬ ಕೋಟಿ ರೂ.ಗಳು.

ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ೨೫ ಕೋಟಿ ರೂ. ಗಳು.

ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ೨೭೭.೬ ಕೋಟಿ ರೂ. ಗಳು.

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ೪೯೭ ಕೋಟಿ ರೂ. ಗಳು.

ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ೨೮೩೧ ಕೋಟಿ ರೂ. ಗಳು.

ಏಳನೆಯ ಯೋಜನೆಯಲ್ಲೂ ಅತ್ಯಂತ ಪ್ರಾಮುಖ್ಯತೆಯನ್ನು ಕುಟುಂಬ ಯೋಜನೆಗೆ ಕೊಡಲಾಗಿದ್ದು ಕಂಡು ಬರುತ್ತದೆ.

ಇಷ್ಟೆಲ್ಲಾ ಪ್ರಯತ್ನ ಸರಕಾರ ಮಾಡಿದರೂ ಕೂಡಾ ಕುಟುಂಬ ಯೋಜನೆ ನಮ್ಮ ದೇಶದಲ್ಲಿ ಯಾಕೆ ಯಶಸ್ವಿಯಾಗಿಲ್ಲವೆಂಬುವಕ್ಕೆ ಈ ಕಾರಣಗಳನ್ನು ಕೊಡಬಹುದು.

೭. ಮೂಢನಂಬಿಕೆಗಳು

ಮೂಢನಂಬಿಕೆಗಳಲ್ಲಿ ಎರಡು ಪ್ರಕಾರಗಳಿವೆ. (೧) ಪ್ರಾಚೀನ (ಧರ್ಮ ಪ್ರಮುಖ ಪಾತ್ರ (೨) ನೂತನ (ಅನಕ್ಷರತೆ ಪರಂಪರೆ ಮತ್ತು ಪ್ರಗತಿಯ ಮಧ್ಯದ ಘರ್ಷಣೆ ಪ್ರಮುಖ ಪಾತ್ರ).

ನೂತನ ಮೂಢ ನಂಬಿಕೆಗಳಾದ (೧) ಅಧಿಕ ಪ್ರಮಾಣದಲ್ಲಿ ಜನರು ಅಶಿಕ್ಷಿತರಾಗಿರುವುದರಿಂದ ಕುಟುಂಬ ಯೋಜನೆಯ ವಿಧಿ ವಿಧಾನಗಳನ್ನು ಅಳವಡಿಸುವಲ್ಲಿ ವಿಫಲರಾಗಿದ್ದಾರೆ.

೨) ಸುರಕ್ಷಿತ ಹಾಗೂ ಪರಿಣಾಮಕಾರಿಯಾದ ಕುಟುಂಬ ಯೋಜನೆ ಜನರಿಗೆ ಆಗಲಾರದಕ್ಕೆ ಈ ಯೋಜನೆಯು ಪ್ರಗತಿಗೆ ಧಕ್ಕೆ ಬಂದಿದೆ. ಉದಾಹರಣೆಗಾಗಿ ಗಂಡಸರು ಕುಟುಂಬ ಯೋಜನೆಯು ಆಪರೇಶನ್ ಮಾಡಿಸಿಕೊಂಡು ನಂತರ ಪುನಃ ಮಕ್ಕಳಾದಾಗ ಹೆಂಡತಿಯು ಮೇಲೆ ಸಂಶಯ ತಾಳಿ ಅವಳಿಗೆ ಅಪವಾದ ಹೊರಿಸಿ ಎಷ್ಟೋ ಕುಟುಂಬಗಳು ಹಾಳಾಗಿದ್ದು ಉಂಟು.

೩) ನುರಿತ ಡಾಕ್ಟರರು ಹಾಗೂ ನರ್ಸುಗಳ ಅಭಾವ ದಿಂದಾಗಿ ಕುಟುಂಬ ಯೋಜನೆಯುನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ವಿಫಲವಾಗಿದೆ. ಇವರಿಗೆ ಸರಿಯಾದ ಜ್ಞಾನ ವಿಲ್ಲದಿರುವದರಿಂದ ಆಪರೇಶನ್ ಮಾಡುವಾಗ ಎಷ್ಟೋ ಜನರು ಸಾವಿಗೀಡಾಗುವದು. ಇದರಿಂದ ಜನರಿಗೆ ಹೆದರಿಕೆಯುಂಟಾಗಿ ಜನರು ಸ್ವಯಂಪ್ರೇರಿತರಾಗಿ ಕುಟುಂಬ ಯೋಜನೆಯುನ್ನು ಮಾಡಿಸಿಕೊಳ್ಳಲು ಮುಂದು ಬರಲಾರರು.

ಇವೆಲ್ಲ ಪಲವಾರು ಕಾರಣಗಳು ಕುಟುಂಬ ಯೋಜನೆ ಯಶಸ್ವಿಯಾಗದಿರಲು ಮುಖ್ಯವಾಗಿವೆ. ಈ ರೀತಿ ಕುಟುಂಬ ಯೋಜನೆ ಯಶಸ್ವಿಯಾಗದಿರಲು ಪ್ರಾಚೀನ ಮೂಢನಂಬಿಕೆಗಳ ಪಾತ್ರವೇನು ? ಎಂಬುದಾಗಿ ನೋಡುವಾ.

೮. ಕುಟುಂಬಯೋಜನೆ ಅಯಶಸ್ವಿಯಾಗಲು ಮೂಢನಂಬಿಕೆಗಳ ಪಾತ್ರ

ಮೂಢನಂಬಿಕೆಯ ಅರ್ಥ : ಮೂಢನಂಬಿಕೆಗಳೆಂದರೆ "ಅಜ್ಞಾನದಿಂದಾಗಿ ಪರಂಪರಾನುಗತವಾಗಿ ಒಪ್ಪಿಕೊಂಡು ಅನುಸರಿಸುತ್ತ ಬಂದ ಸಂಗತಿಗಳು ಎಂದು ಸ್ಥೂಲವಾಗಿ ವ್ಯಾಖ್ಯಾನಿಸಬಹುದು".

ಕುಟುಂಬಯೋಜನೆ ಅಯಶಸ್ವಿಯಾಗಲು ಮೂಢನಂಬಿಕೆಗಳ ಪಾತ್ರ :

ಕುಟುಂಬಯೋಜನೆ ಯಶಸ್ವಿಯಾಗದಿರಲು ನಮ್ಮಲ್ಲಿ ಬೇರೂರಿದ ಮೂಢನಂಬಿಕೆಗಳು ಬಹುಮಟ್ಟಿಗೆ ಕಾರಣವೆಂದು ಹೇಳಲು ಯಾವ ಸಂಶಯವಿಲ್ಲ. ಹಳ್ಳಿಯಲ್ಲಿ ನಮ್ಮ ಹಿಂದಿನ ಹಿರಿಯರಲ್ಲಿ ಮನೆಮಾಡಿಕೊಂಡಿರುವ ಹಲವಾರು ಮೂಢನಂಬಿಕೆಗಳು ಕುಟುಂಬ ಯೋಜನೆಯ ಯಶಸ್ಸಿಗೆ ಕೊಡಲಿ ಪೆಟ್ಟನ್ನು ಹಾಕಿವೆ. ಹಳ್ಳಿಗಳು ಸುಧಾರಿಸದೇ ಯಾವುದೇ ನಮ್ಮ ಯೋಜನೆಗಳು ಯಶಸ್ವಿಯಾಗುವದು ಕಷ್ಟ. ಅದಕ್ಕಾಗಿ ಮಹಾತ್ಮಾ ಗಾಂಧಿಜೀಯವರು ಗ್ರಾಮ ರಾಜ್ಯ ರಾಮರಾಜ್ಯವಾಗಬೇಕೆಂದು ಆಶಯ ಪಟ್ಟರು. ನಾವು ಹಳ್ಳಿಯಲ್ಲಿ ಕುಟುಂಬ ಯೋಜನೆಯ ಬಗ್ಗೆ ತಿಳಿ ಹೇಳಲು ಹೋದರೆ ಅವರು ಕೆಲವೊಂದು ಮೂಢನಂಬಿಕೆಗಳನ್ನು ಕುರಿತು ಹೇಳುವರು.

ನಮ್ಮ ಭಾರತೀಯ ಸಂಪ್ರದಾಯದಂತೆ ಹೆಣ್ಣಾಗಲಿ, ಗಂಡಾಗಲಿ ಹುಟ್ಟಿದ ಮೇಲೆ ಲಗ್ನವಾಗಲೇಬೇಕು. ಅಂದರೆ ಅವರಿಗೆ ಮುಕ್ತ್ಯವೇತನ ಲಭಿಸುವದು. ಹೆಣ್ಣುಮಕ್ಕಳು ಲಗ್ನ ವಾದ ಮೇಲೆ ಗಂಡನ ಮನೆಗೆ ಹೋಗುವಾಗ ನಮ್ಮ ಹಿರಿಯರು ಅವಳಿಗೆ "ಅಷ್ಟಪುತ್ರ ಸೌಭಾಗ್ಯವತಿ" ಎಂದು ಹರಿಸುವದುಂಟು. ಇದರರ್ಥ ಎಂಟು ಮಕ್ಕಳ ತಾಯಿಯಾಗು. ಆದರೆ ಹಿಂದೆ ಈ ಜನಸಂಖ್ಯೆ ಸಮಸ್ಯೆಯಿಲ್ಲದಾಗ ಇದರ ಪ್ರಾಮುಖ್ಯತೆಯಿತ್ತು. ಈಗ ಅದು ವಿರುದ್ಧವಾಗಿದೆ. ಈಗ ಏಕಪುತ್ರ ಅಥವಾ ದ್ವಿಪುತ್ರ ಸೌಭಾಗ್ಯವತಿ ಎಂತಲೇ ಹರಸಬೇಕು. ಅಂದರೆ ಜನಸಂಖ್ಯೆ ಯನ್ನು ಮಿತಗೊಳಿಸಲು ಸಹಾಯವಾಗುವದು. ವಿವಾಹವಾದ ದಂಪತಿಗಳಿಗೆ ವರ್ಷ ತುಂಬುವದರೊಳಗಾಗಿ ಮಕ್ಕಳಾಗಲೇಬೇಕು. ಮಕ್ಕಳನ್ನು ಪಡೆಯುವ ಸಲುವಾಗಿ ಇಂದು ಕೂಡಾ ಮಹಿಳೆಯರು ಪೂಜೆ ಪುನಸ್ಕಾರಗಳನ್ನು ಮಾಡುವದನ್ನು ನಾವೆಲ್ಲರೂ ಕಾಣ ಬಹುದು. ಮಕ್ಕಳೇ ಮನೆಗೆ ಮಾಣಿಕ್ಯ, ಮಕ್ಕಳಿಲ್ಲದ ಮನೆ ಸುಡುಗಾಡು. ಎಂಬ ಜಾನಪದ ಗೀತೆಯನ್ನು ನಾವು ಕೇಳಿದ್ದೇವೆ. ಮಕ್ಕಳಾಗದವರಿಗೆ 'ಬಂಜೆ' ಎಂಬ ಶಬ್ದವನ್ನು ಹೊರಿಸುವರು. ಬಂಜೆಯ ಬಾಳು ರಸವಿಲ್ಲದ ಹಣ್ಣಿನಂತೆ, ಬಾಗಿದ ಗಿಡ ದಂತೆ, ನೀರಿಲ್ಲದ ಕೆರೆಯಂತೆ. ಇವಲ್ಲದೆ ನಮ್ಮ ಜಾನಪದ ಪದ್ಯಗಳಲ್ಲಿ ಬಂಜೆಯ ಬಾಳಿನ ಬಗ್ಗೆ ನಮ್ಮ ಕವಿಗಳು ಈ ರೀತಿಯಾಗಿ ಹೇಳಿದ್ದಾರೆ.

'ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡಿಗೆಯ ಎತ್ತು ದುಡಿದ್ಹಂಗ
ಬಾಳೆಲಿಯ ಹಾಸುಂಡು ಬೀಸಿ ಒಗೆದ್ಹಂಗ

ಎಂಬಂತೆ ಅವಳ ಜೀವನ ವ್ಯರ್ಥವೆಂದು ಹೇಳುವರು. ಮಕ್ಕಳಾಗದ ಹೆಣ್ಣುಮಕ್ಕಳು ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ಕರ್ಮಕ್ಕಾಗಿ ಈ ಜನ್ಮದಲ್ಲಿ ಮಕ್ಕಳಾಗಲಿಲ್ಲವೆಂದು ಶಾಪ ಕೊಡುವರು. ಅದಕ್ಕಾಗಿ ಹಿಂದಿನ ಕಾಲದಲ್ಲಿ ಮಕ್ಕಳಾಗದ ರಾಜರು ಹಾಗೂ ಶ್ರೀಮಂತರು 'ಪುತ್ರ ಕಾಮೇಷ್ಟಿ' ಯಜ್ಞ ಇತ್ಯಾದಿಗಳನ್ನು ಮಾಡಿ ಸಂತಾನ ಪಡೆಯುವ ಸಾಂಪ್ರದಾಯವನ್ನು ನಾವು ಇತಿಹಾಸದಲ್ಲಿ ಓದಿದ್ದೇವೆ. ಇನ್ನು 'ಅಪುತ್ರಸ್ಯ ಗತಿರ್ನಾಸ್ತಿ' ಅಂದರೆ ಮಕ್ಕಳಿಲ್ಲದವರಿಗೆ ಮೋಕ್ಷವಿಲ್ಲ ಅಥವಾ ಸದ್ಗತಿಯಿಲ್ಲ. ಆದ್ದರಿಂದಲೇ "ಬಡತನ ಬೇಕಾದಷ್ಟು ಇರಲಿ ಮನೆ ತುಂಬ ಮಕ್ಕಳಿರಲಿ ಎಂದು ಬೇಡಿಕೊಳ್ಳುವರು. ಇನ್ನು ಕೆಲವರು ದಿನೆ ದಿನೆ ಬೆಳೆಯುತ್ತಿರುವ ಈ ಜನಸಂಖ್ಯೆಯು ದೇಶದ ಪ್ರಗತಿಗೆ ದೊಡ್ಡ ಸಮಸ್ಯೆಯಾಗಿದೆ. ಇದರಿಂದ ದೇಶದಲ್ಲಿ ಆರ್ಥಿಕ ಸಮಸ್ಯೆ ಅತೀವ ರೀತಿಯಲ್ಲಿ ನಮ್ಮನ್ನು ಹೀನಸ್ಥಿತಿಗೆ ಒಯ್ಯುತ್ತದೆ. ಆದುದರಿಂದ ಅಕ್ಷರಸ್ಥ. ಅನಕ್ಷರಸ್ಥರೆಲ್ಲರಿಗೂ ಇದರ ವಿಷಯವಾಗಿ ಸೂಕ್ಷ್ಮವಾದ ರೀತಿಯಲ್ಲಿ ತಿಳಿ ಹೇಳಿ ಜನರನ್ನು ಜನನ ನಿಯಂತ್ರಣದ ಮಾರ್ಗದತ್ತ ಒಯ್ಯಬೇಕು. ಆದರೆ ಎಲ್ಲ ಮಾನವರಲ್ಲಿ ಒಂದೇ ತರನಾದ ಗುಣಗಳಿರುವದಿಲ್ಲ. ಒಬ್ಬೊಬ್ಬರಲ್ಲಿ ಒಂದೊಂದು ರೀತಿಯ ಗುಣಗಳಿರುತ್ತವೆ. ಅದರಲ್ಲಿಯೂ ಅನಕ್ಷರಸ್ಥರಿಗಂತೂ ತಿಳಿ ಹೇಳುವದು ಕಷ್ಟಕರವಾದ ಸಂಗತಿ ಏಕೆಂದರೆ ಅವರಲ್ಲಿ ಮೊದಲಿನಿಂದಲೂ ಬಂದಂಥ ಮೂಢನಂಬಿಕೆಗಳಿರುವದರಿಂದ ಅವರು ತಮ್ಮದೇ ಆದ ಪದ್ಧತಿಗೆ ಅಂಟಿಕೊಳ್ಳುವರು. ಅನಕ್ಷರಸ್ಥರನ್ನು ನೀವೇಕೆ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳ

ಬಾರದು ? ಎಂದು ಕೇಳಿದಾಗ 'ಹುಟ್ಟಿದ ದೇವರು ಹುಲ್ಲು ಮೇಯಿಸುವನು' ನಮ್ಮ ಹಿಂದಿನವರೆಲ್ಲ ಇದನ್ನು ಕಂಡಿರಲಿಲ್ಲ. ಕೇಳಿರಲಿಲ್ಲ. ಅವರೆಲ್ಲ ಬಾಳಿ ಬದುಕಲಿಲ್ಲವೆ. ಕಾಡಿನಲ್ಲಿ ಹುಟ್ಟುವ ಮೃಗ ಪಕ್ಷಿಗಳಿಗೆ ಯಾವ ಸರಕಾರ ಹುಲ್ಲು ಕೊಡುತ್ತಿದೆ ಹೇಳಿ ಎಂದು ಅವರು ಹೇಳುತ್ತಾರೆ. ಮೇಲೆ ಹೇಳಿದಂತೆ ಹುಟ್ಟಿಸಿದ ಶಿವ ಹುಲ್ಲು ಮೇಯಿಸುವನೆ ಎಂಬ ಅಭಿಪ್ರಾಯಕ್ಕೆ ಪರೋಕ್ಷವಾಗಿಯಲ್ಲದಿದ್ದರೂ ಅಪರೋಕ್ಷವಾಗಿ ಹೆಚ್ಚು ಜನಸಂಖ್ಯೆ ಬೆಳೆದು ಆಹಾರ ಅಭಾವಕ್ಕೀಡಾಗಿ ತೊಂದರೆ ಪಡಬಹುದು. ಇನ್ನು ಕೆಲವರು ಮೂಢನಂಬಿಕೆಗಳನ್ನು ಹೇಳಿ ಕಡಿಮೆ ಸಂತಾನ ಪಡೆಯುವವರಿಗೆ ಅಡ್ಡ ಬರುವರು, ಉದಾಹರಣೆಗಾಗಿ 'ಹುಟ್ಟಿದವರ ಅನ್ನ ಅವರ ಪದರಿನಲ್ಲಿ' ಮಕ್ಕಳು ದುಡಿದು ಕುಟುಂಬದ ಆದಾಯವನ್ನು ಹೆಚ್ಚಿಸುವರೆಂಬ ತಂದೆ ತಾಯಿಗಳ ಅಭಿಪ್ರಾಯವಾಗಿದೆ.

ಆರ್ಥಿಕವಾಗಿ ಹಿಂದುಳಿದ ರೈತರಾಗಲಿ ಅಥವಾ ಕಾರ್ಮಿಕ ವರ್ಗದವರಿಗೆ ಒಂದು ಕುಟುಂಬಕ್ಕೆ ಕನಿಷ್ಠ ಅರ್ಧ ಡಜನ್ ಮಕ್ಕಳಾದರೂ ಬೇಕು. ಏಕೆಂದರೆ ಒಬ್ಬರಿಂದಲೇ ಕುಟುಂಬವನ್ನು ನಡೆಸುವದು ಸಾಧ್ಯವಿಲ್ಲ. ಆದರೆ ಮಕ್ಕಳೆಲ್ಲ ದುಡಿದು ಸಂಬಳ ತಂದಾಗ ಹೊಟ್ಟೆ ತುಂಬ ಆಹಾರ ಮೈತುಂಬ ಬಟ್ಟೆ ಸಿಗಬಹುದೆಂಬ ನಂಬಿಕೆ ಜನರಲ್ಲಿರುತ್ತದೆ. ಮನೆ ತುಂಬ ಮಕ್ಕಳಿದ್ದರೆ ಅದೇ ಆತನಿಗೆ ಆಸ್ತಿ. ಆದರೆ ಇಂದಿನ ಪರಿಸ್ಥಿತಿಯೇ ಬೇರೆ ಆಗಿದೆ.

ಕುಟುಂಬ ಯೋಜನೆ ಮಾಡಿಸಿಕೊಳ್ಳುವದು 'ಭ್ರೂಣ ಹತ್ಯೆ' ಮಾಡಿದಂತಾಗುವದು. ಅಂದರೆ ಆಗುವ ಸಂತಾನವನ್ನು ನಾಶ

ತಡೆಯುವದು ಇಲ್ಲವೆ ಮೊಳಕೆಯನ್ನು ಚಿವುಟಿ ಒಗೆದಂತಾಗುವದು. ಅದು 'ಮಹಾಪಾಪ' ವೆಂದು ಧರ್ಮಗುರುಗಳು ಹಾಗೂ ಧರ್ಮ ಗ್ರಂಥಗಳು ಹೇಳುವವು. ಇದಲ್ಲದೆ ನಮ್ಮ ಹಿಂದಿನ ಹಿರಿಯರು ಕೆಲವೊಂದು ಕಟ್ಟು ಕಥೆಗಳನ್ನು ಹೇಳಿ ಈ ಕುಟುಂಬಯೋಜನೆಗೆ ಕಲ್ಲು ಹಾಕುವರು. ಉದಾಹರಣೆಗಾಗಿ ವಿವೇಕ ವಿಪಟ್ಟತೆ ಮಹಾರಾಜ ತನ್ನ ಹೆಂಡತಿ ಇನ್ನೊಂದು ಮಗು ಬೇಕೆಂದು ಕೇಳಿದಾಗ ಅವನು ಅದಕ್ಕೆ ನಿರಾಕರಿಸಿದ್ದಕ್ಕೆ ಅವನಿಗೆ ಸತ್ತ ಮೇಲೆ ಪಾಪ ತಟ್ಟಿ ನರಕ ದರ್ಶನವಾಯಿತೆಂದು ಹೇಳಿ ಜನರಿಗೆ ಬೇರೆ ಮಾರ್ಗ ತಿಳಿಯಲು ಹಚ್ಚುವರು. ಇದಲ್ಲದೆ ಕೆಲವರಿಗೆ ಒಬ್ಬನೇ ಮಗನಿದ್ದರೆ ಅಪಾರ ಸಂಸಾರವನ್ನು ಪಡೆಯುವದಕ್ಕಾಗಿ ಬಾಲ್ಯದಲ್ಲಿಯೇ ಅವನಿಗೆ ಮದುವೆ ಮಾಡಿ 'ಬೊಟ್ಟು ಇದ್ದದ್ದನ್ನು ಬೆಟ್ಟವಾಗಿ ಬೆಳಸಲು ಪ್ರಯತ್ನಿಸುವರು. ಹೇಗೆಂದರೆ ಒಬ್ಬನೆ ಇದ್ದಾಗ ಅವನಿಗೆ ಬೇಗನ ಮದುವೆ ಮಾಡುವದರಿಂದ ಸಾಕಷ್ಟು ಸಂಸಾರ ಬೆಳೆಯಲು ಅನುಕೂಲವಾಗುವದು.

ಇದಲ್ಲದೆ ಕೆಲವು ಮುದುಕರಿಗೆ ತಮ್ಮ ಮೊಮ್ಮಕ್ಕಳಿಗೆ ತಾವು ಜೀವಂತವಿರುವಾಗಲೇ ಬೇಗನೆ ಮದುವೆ ಮಾಡಿ ಮರಿ ಮೊಮ್ಮಕ್ಕಳನ್ನು ನೋಡಿ ಆನಂದ ಪಡೆಯಬೇಕೆಂಬ ಆಶೆ. ಇನ್ನು ಕರ್ಮ ಸಿದ್ಧಾಂತ, ಧಾರ್ಮಿಕ ಹಾಗೂ ಸಾಮಾಜಿಕ ಪದ್ಧತಿಗಳಲ್ಲಿ ನಮ್ಮ ಜನರು ಅಚಲವಾದ ನಂಬಿಕೆಯನ್ನು ಹೊಂದಿದವರಾಗಿದ್ದಾರೆ. ಮಕ್ಕಳು ಹುಟ್ಟುವದು ದೇವರ ಪ್ರಸಾದ ಅವನ ಇಚ್ಛೆ ಇರುವ ವರೆಗೆ ಮಕ್ಕಳಾಗುತ್ತವೆ. ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಆದರೆ ಇದಕ್ಕೆ ವಿರೋಧವಾಗಿ ಅನೇಕ ಧರ್ಮಗಳಲ್ಲಿಯೂ ಕೃತಕ

ಹಾದ ರೀತಿಯಲ್ಲಿ ಜನನ ನಿಯಂತ್ರಣ ಮಾಡುವುದು ಅವರ ಧರ್ಮಕ್ಕೆ ದ್ರೋಹ ಬಗೆದಂತೆ ಹಾಗೂ ಅದು ಮಹಾ ಪಾಪವೆಂದು ತಿಳಿಯುವರು. ಅದಕ್ಕಾಗಿ ಮಕ್ಕಳು ದೇವರ ಕೊಡುಗೆ ನಮ್ಮ ಕೈಯಲ್ಲಿಯೇನಿದೆ. ಕೊಡುವ ದೇವನಿಗೆ ಬೇಡನ್ನಬಾರದು. ಮಕ್ಕಳು ಹೆಚ್ಚಾದರೆ ತಾಯಿ ಮಕ್ಕಳ ಆರೋಗ್ಯ. ಮಕ್ಕಳ ವಿದ್ಯೆ, ಬಟ್ಟೆ ಇತ್ಯಾದಿ ಸಮಸ್ಯೆಗಳ ಬಗ್ಗೆ ತಿಳಿಸಿ ಹೇಳಿದಾಗ. ಅವರು ಅದುಕ್ಕುತ್ತರವಾಗಿ ಸರಕಾರ ಮಕ್ಕಳು ಹೆಚ್ಚಾದರೆ ಕಡಿಮೆ ಮಾಡಲು ಹೇಳುವರು. ಆದರೆ ಮಕ್ಕಳು ಇಲ್ಲದವರಿಗೆ ಸರಕಾರ ಏನಾದರೂ ಮಕ್ಕಳನ್ನು ಕೊಡಬಲ್ಲರೆ? ಉದಾಹರಣೆಗಾಗಿ ಮಹಾತ್ಮಾಗಾಂಧಿ. ಕೃಷ್ಣ ಪರಮಾತ್ಮ ಮುಂತಾದ ಉದಾಹರಣೆಗಳನ್ನು ಕೊಡುವರು. ಯಾಕೆಂದರೆ ಮಹಾತ್ಮಾಗಾಂಧಿ ತಂದೆ ತಾಯಿಗಳಿಗೆ ಎರಡು ಅಥವಾ ಮೂರು ಮಕ್ಕಳಾದರೆ ಮಹಾತ್ಮ ದೇಶಪಿತ ಗಾಂಧಿಯವರು ಹುಟ್ಟುತ್ತಿದ್ದಿಲ್ಲ. ಶ್ರೀಕೃಷ್ಣ ಪರಮಾತ್ಮನು ವಾಸುದೇವನಿಗೆ ಎಂಟನೆಯ ಮಗನಾಗಿ ಜನಿಸಿಲ್ಲವೆ? ಹಾಗೂ ಮಹಾಭಾರತದಲ್ಲಿ ಕೌರವರು ಒಂದು ನೂರು ಜನರಿರಲಿಲ್ಲವೆ? ಹೀಗೆ ಒಂದು ಎರಡು ಮಕ್ಕಳಿಗಿಂತ ನಂತರ ಹುಟ್ಟುವ ಮಕ್ಕಳು ಬಹಳ ಬುದ್ಧಿವಂತರು ಹಾಗೂ ಚುರುಕು ಸ್ವಭಾವದವರಾಗುತ್ತಾರೆಂದು ನಮ್ಮ ಹಿರಿಯರ ಅಭಿಪ್ರಾಯವಾಗಿದೆ. ಇದಲ್ಲದೆ ಹಿಂದಿನ ಕಾಲದಲ್ಲಿ 'ಬಹುಪತ್ನಿತ್ವ' ಪದ್ಧತಿಯು ತುಂಬಾ ಜಾರಿಯಲ್ಲಿತ್ತು. ಅಗ ಒಬ್ಬರಿಗಿಂತ ಹೆಚ್ಚು ಹೆಣ್ಣು ಮಕ್ಕಳನ್ನು ಲಗ್ನವಾದರೆ ಸಮಾಜದಲ್ಲಿ ಅವನಿಗೆ ಪ್ರತಿಷ್ಠತೆ ಹಾಗೂ ಗೌರವ ದೊರಕುವದೆಂದು ಜನರು ಭಾವಿಸಿದ್ದರು. ಹೆಚ್ಚಾಗಿ

ಶ್ರೀಮಂತರು ಹಿಂದಿನ ಕಾಲದಲ್ಲಿ ಬಹುಪತ್ನಿತ್ವಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ಹೀಗಿರುವದರಿಂದ ಜನಸಂಖ್ಯೆ ತೀವ್ರವಾಗಿ ಬೆಳೆಯಲು ಕಾರಣವಾಯಿತು. ಇನ್ನು ಹೆಂಗಸರಾಗಲಿ ಅಥವಾ ಗಂಡಸರಾಗಲಿ ಜನನ ನಿಯಂತ್ರಣದ ಸಲಕರಣೆಗಳನ್ನು (Contraceptives) ಉಪಯೋಗಿಸುವದು ಅಧರ್ಮದ ಹಾದಿ ತುಳಿದಾಗ ಎಂದು ಹೇಳುವರು. ಒಂದು ವೇಳೆ ಹೆಂಗಸರು ಕುಟುಂಬ ಯೋಜನೆಯ ಅಪರೇಶನ್ ಮಾಡಿಸಿಕೊಂಡು ಯಾವದೋ ಒಂದು ಕಾರಣದಿಂದಾಗಿ ಸಾವಿಗೀಡಾದರೆ ಅವಕ್ಕೆ ಹಳ್ಳಿಯ ಜನರು ಆಗುವ ಸಂತಾನ ಹರಣ ಮಾಡಿದ್ದರಿಂದ ಅವಳಿಗೆ ಪಾಪ ತಟ್ಟಿ ಸತ್ತಳೆಂದು ಹೇಳುವರು.

ಇವೆಲ್ಲ ಮೇಲೆ ತಿಳಿಸಿದ ನೂತನ ಹಾಗೂ ಪ್ರಾಚೀನ ಮೂಢನಂಬಿಕೆಗಳು ಕುಟುಂಬ ಯೋಜನೆಗೆ ಪೆಟ್ಟನ್ನು ಹಾಕಿವೆಯೆಂದರೆ ತಪ್ಪಾಗಲಾರದು.

ಈ ಕುಟುಂಬ ಯೋಜನೆ ಯಶಸ್ವಿಯಾಗಬೇಕಾದರೆ ಈ ಕೆಳಗೆ ಕಾಣಿಸಿದ ಸಲಹೆಗಳನ್ನು ಅಚ್ಚುಕಟ್ಟಾಗಿ ಪಾಲಿಸಬೇಕು.

೧. ಶಿಕ್ಷಣ ಪ್ರಸಾರ :

ಕುಟುಂಬ ಯೋಜನೆಯನ್ನು ವಿರೋಧಿಸುವವರು ಸಾಮಾನ್ಯವಾಗಿ ಅಶಿಕ್ಷಿತರು. ಅದನ್ನು ಸ್ವಾಗತಿಸುವವರು ಸುಶಿಕ್ಷಿತರು. ಅದ್ದರಿಂದ ಜನರಿಗೆ, ಅದರಲ್ಲೂ ಮುಖ್ಯವಾಗಿ ಸ್ತ್ರೀಯರಿಗೆ, ಕಡ್ಡಾಯದ ಶಿಕ್ಷಣದ ಮೂಲಕ ಸುಶಿಕ್ಷಿತರನ್ನಾಗಿ

ಮಾಡುವುದು ಅಗತ್ಯವಿದೆ. ಜನರಿಗೆ ಹೆಚ್ಚು ಹೆಚ್ಚು ಶಿಕ್ಷಣ ಕೊಟ್ಟಂತೆ ಅವರಿಗೆ ಕುಟುಂಬ ಯೋಜನೆಯ ಮಹತ್ವ ಗೊತ್ತಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಜನರು ಹೆಚ್ಚು ಸುಶಿಕ್ಷಿತರಾಗಿರುವುದರಿಂದ, ಅವರು ಕಡಿಮೆ ಮಕ್ಕಳನ್ನು ಹೊಂದಿರುತ್ತಾರೆ. ಭಾರತದಲ್ಲಿ ಸುಶಿಕ್ಷಿತರು ಕಡಿಮೆಯಿರುವುದರಿಂದ ಜನಸಾಮಾನ್ಯರಿಗೆ ಅದರಲ್ಲಿ ಮುಖ್ಯವಾಗಿ ಸ್ತ್ರೀಯರಿಗೆ ಹಾಗೂ ಗ್ರಾಮೀಣ ಪ್ರದೇಶಗಳ ಜನರಿಗೆ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಿ ಅವರನ್ನು ಸುಶಿಕ್ಷಿತರನ್ನಾಗಿ ಮಾಡಲು ಸರಕಾರವು ಕ್ರಮ ಕೈಕೊಂಡಿದೆ. ಆದರೆ ಈ ಕಾರ್ಯಕ್ರಮವನ್ನು ಇನ್ನೂ ಚುರುಕುಗೊಳಿಸಬೇಕಾಗಿದೆ.

೨. ಸ್ತ್ರೀಯರ ಸ್ಥಾನಮಾನದಲ್ಲಿ ಏರಿಕೆ:

ಸ್ತ್ರೀಯರಿಗೆ ಸಮಾಜದಲ್ಲಿ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಯೋಗ್ಯ ಸ್ಥಾನವನ್ನು ಕಲ್ಪಿಸಿಕೊಡುವುದರಿಂದ ಅವರಿಗೆ ಕುಟುಂಬ ಯೋಜನೆಯ ಮಹತ್ವ ಮತ್ತು ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆಯ ದುಷ್ಪರಿಣಾಮಗಳ ಅರಿವು ಆಗುತ್ತದೆ.

೩. ಆಮಿಷಗಳು:

ಸರಕಾರವು ಕುಟುಂಬ ಯೋಜನೆಗೆ ಒಳಗಾಗುವವರಿಗೆ ನಗದು ಬಹುಮಾನ, ಸೇವೆಯಲ್ಲಿ ಬಡ್ತಿ, ಶಿಕ್ಷಣ ಸೌಲಭ್ಯ, ಉದ್ಯೋಗ ಭರವಸೆ ಮುಂತಾದ ಆಮಿಷಗಳನ್ನು ಒದಗಿಸಿ ಅವರ ಮನವೊಲಿಸಬೇಕು. ಅಂದರೆ ಜನರು ತಾವಾಗಿಯೇ ಕುಟುಂಬ ಯೋಜನೆಯನ್ನು ಅನುಸರಿಸಲು ಮುಂದಾಗುತ್ತಾರೆ.

೪. ಪ್ರತಿಕೂಲತೆಗಳು:

ಸರಕಾರವು ಯಾರು ಕುಟುಂಬ ಯೋಜನೆಯನ್ನು ಪಾಲಿಸುವದಿಲ್ಲವೋ ಅಂಥವರಿಗೆ ಹಲವಾರು ಪ್ರತಿಕೂಲತೆಗಳನ್ನು ಒಡ್ಡಬೇಕು. ಉದಾಹರಣೆಗಾಗಿ ನೌಕರರಿಯಲ್ಲಿದ್ದರೆ ಬಡ್ತಿ, ವೇತನದಲ್ಲಿ ಕಡಿತ, ಇನ್ನಿತರ ಕೊಡಮಾಡಿದ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳುವದು, ಇವೇ ಮೊದಲಾದ ಪ್ರತಿಕೂಲತೆಗಳನ್ನೂ ತೋರಿ ಜನರು ಕಡ್ಡಾಯವಾಗಿ ಚಿಕ್ಕ ಕುಟುಂಬ ಹೊಂದುವಂತೆ ಕ್ರಮ ಕೈಕೊಳ್ಳಬೇಕು.

೫. ಜನರಿಗೆ ಗರ್ಭ ನಿರೋಧಕಗಳನ್ನು ವಿದೇಶಗಳಿಂದ ಆಯಾತ ಮಾಡಿಕೊಂಡು ಪುಕ್ಕಟೆಯಾಗಿ ವಿತರಣೆ ಮಾಡಬೇಕು

೬ ಕುಟುಂಬ ಯೋಜನೆಯ ಪರಿಣಾಮಗಳನ್ನು ಸರಿಯಾಗಿ ಹೇಳಲು ನುರಿತ ಹಾಗೂ ತರಬೇತಿ ಹೊಂದಿದವರನ್ನು ನೇಮಿಸಬೇಕು.

೭ ಎಲ್ಲ ಸಾರ್ವಜನಿಕ ಆಸ್ಪತ್ರೆಗಳಿಗೆ ಕುಟುಂಬ ಯೋಜನೆಯ ಕೇಂದ್ರಗಳನ್ನು ಜೋಡಿಸಬೇಕು.

೮ ಶಸ್ತ್ರಚಿಕಿತ್ಸೆ ಮಾಡುವಾಗ ನೋವಾಗದಂತೆ ಡಾಕ್ಟರರು ಹೆಚ್ಚು ಕಾಳಜಿವಹಿಸಬೇಕು.

೯ ಎಲ್ಲರಿಗೂ ಎಲ್ಲ ಧರ್ಮದವರಿಗೂ ಕುಟುಂಬ ಯೋಜನೆ ಕಡ್ಡಾಯವಾಗುವಂತೆ ಸರಕಾರ ಕಾಯ್ದೆ ಪಾಸು ಮಾಡಬೇಕು.

೧೦ ವ್ಯಾಪಕ ಪ್ರಚಾರವನ್ನು ಸರಕಾರ ಕೈಕೊಳ್ಳಬೇಕು. ಚಲನಚಿತ್ರಗಳ ಮೂಲಕ. ವ್ಹಿಡಿಯೋ ಕ್ಯಾಸೆಟ್, ಟೆಲಿವ್ಹಿಜನ್, ಜಾಹೀರಾತುಗಳ ಮೂಲಕ ಪ್ರಚಾರ ಕಾರ್ಯ ಕೈಕೊಂಡರೆ ಜನರ ಮನಸ್ಸಿನ ಮೇಲೆ ನಿಯಂತ್ರಣಗಳನ್ನು ಅನುಸರಿಸಲು ಇಷ್ಟ ಪಡುತ್ತಾರೆ.

೧೧ ಬಾಲವಿವಾಹ ಪದ್ಧತಿಯನ್ನು ರದ್ದುಗೊಳಿಸಬೇಕು

೧೨ ಮದುವೆಯ ವಯಸ್ಸನ್ನು ಹೆಚ್ಚಿಸುವದು

೧೩ ಭಾರತೀಯರಲ್ಲಿ ಬೇರೂರಿದ ಅಜ್ಞಾನ ಅಂಧಕಾರ ಹಾಗೂ ಕುರುಡು ಮೂಢನಂಬಿಕೆಯನ್ನು ಹೋಗಲಾಡಿಸಿ ಎಲ್ಲರಿಗೂ ಶಿಕ್ಷಣ ಕೊಡಬೇಕು. ಅದರಲ್ಲಿ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ವಯಸ್ಕರ ಶಿಕ್ಷಣವನ್ನು ಕಡ್ಡಾಯ ಗೊಳಿಸಬೇಕು. ಸರ್ವ ಸಾಮಾನ್ಯರಿಗೂ ವಿದ್ಯಾ ಪ್ರಸಾರ ಕೈಕೊಂಡರೆ ಕುಟುಂಬ ಯೋಜನೆಯು ಪ್ರಗತಿ ಪಥದತ್ತ ಸಾಗು ವದರಲ್ಲಿ ಯಾವ ಸಂಶಯವಿಲ್ಲ. ಇಲ್ಲದಿದ್ದರೆ ಜನಸಂಖ್ಯೆ ವಿಪರೀತ ಬೆಳೆದು ದೇಶದಲ್ಲಿದ್ದ ಜನರಿಗೆ ಕೊನೆಗೆ ಆಹಾರ ಸಿಗದಂತಾಗಿ ಮುಂದುವರೆದ ದೇಶಗಳಿಂದ ಆಹಾರವನ್ನು ತರಿಸಿ ತಿಂದು ಬದುಕು ವಂಥ ಪ್ರಸಂಗ ಬರುವದು. ಹೀಗಾಗುವದರಿಂದ ದೇಶವನ್ನು ಮತ್ತೊಬ್ಬರಿಗೆ ಒತ್ತೆಯಾಗಿ ನಾವೆಲ್ಲ ಒತ್ತೆಯಾಳುಗಳಾಗಿ ದುಡಿ ಯುವ ಪ್ರಸಂಗ ಬರುತ್ತದೆ, ಆದ್ದರಿಂದ ನಾವೆಲ್ಲ ಜಾಗರೂಕತೆ ಯಿಂದ ಕುಟುಂಬ ಯೋಜನೆಗೆ ತಲೆಬಾಗಬೇಕು.

ಕೊನೆಯದಾಗಿ ಮೂಢನಂಬಿಕೆಗಳು ನನ್ನ ಅಭಿಪ್ರಾಯದ ಮೇರೆಗೆ ಇರಬಾರದೆಂದರ್ಥವಲ್ಲ, ಇರಬೇಕು. ಅವು ನಮ್ಮ ಯಾವದೇ ಯೋಜನೆಯಾಗಲಿ ಕಾರ್ಯಕ್ರಮಗಲಿ, ಪ್ರಗತಿಗೆ ಕುಂಠಿತ ವಾಗುವ ಸ್ಥಿತಿಯಲ್ಲಿರಕೂಡದು. ನಮ್ಮ ಹಿಂದುಳಿದ ಭಾರತದಲ್ಲಿ ಮೂಢನಂಬಿಕೆಗಳು ನಮ್ಮ ಹಲವಾರು ಕ್ಷೇತ್ರಗಳಲ್ಲಿಯ ಪ್ರಗತಿಗೆ ಮಾರಕವಾಗಿವೆ. ಉದಾಹರಣೆಗಾಗಿ, ಒಕ್ಕಲುತನದ ಪ್ರಗತಿ ಯಾಗಬೇಕಾದರೆ ನಾವು ಆಧುನಿಕ ಯಂತ್ರೋಪಕರಣಗಳನ್ನು ಮತ್ತು ರಾಸಾಯನಿಕ ಗೊಬ್ಬರಗಳನ್ನು ಉಪಯೋಗ ಮಾಡ ಬೇಕು. ಇವತ್ತಿನವರೆಗೂ ನಮ್ಮ ಹಿರಿಯರು ಗ್ರಾಮೀಣ ಪ್ರದೇಶದಲ್ಲಿ ಕೃಷಿಯಲ್ಲಿ ರಾಸಾಯನಿಕ ಗೊಬ್ಬರವಾದ ಎಲುವಿನ ಪುಡಿಯನ್ನು ಉಪಯೋಗ ಮಾಡುವದಿಲ್ಲ. ಯಾಕೆಂದರೆ ನಮ್ಮ ಹಿರಿಯರಲ್ಲಿ ಬೇರೂರಿದ ಮೂಢನಂಬಿಕೆ ಹಾಗೂ ಅಂಧಕಾರಗಳೇ ಕಾರಣ. ಹೇಗೆಂದರೆ ಭೂಮಿಯಲ್ಲಿ ಎಲುವಿನ ಪುಡಿಯನ್ನು ಉಪಯೋಗ ಮಾಡಿದರೆ ಭೂಮಿತಾಯಿ ಸಿಟ್ಟಿಗೆದ್ದು ನಮಗೆ ತಕ್ಕ ಪ್ರತಿಫಲ ಕೊಡುವದಿಲ್ಲವೆಂದು ಹೇಳುವರು. ಆದಕ್ಕಾಗಿ ಆಧುನಿಕ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸದೇ ಬೇಸಾಯ ಮಾಡುವದರಿಂದ ನಮ್ಮ ಒಕ್ಕಲುತನ ಸುಧಾರಿಸುವ ದಿಲ್ಲ. ಇದರಿಂದಾಗಿ ನಮ್ಮ ದೇಶ ಆರ್ಥಿಕ ಪ್ರಗತಿಯನ್ನು ಸಾಧಿಸುವದಿಲ್ಲ. ಈ ರೀತಿಯಾಗಿ ಮೂಢನಂಬಿಕೆಗಳು ನಮ್ಮ ಕೃಷಿಗೆ ಯಾವ ರೀತಿ ಅಡ್ಡ ಬರುತ್ತಿವೆಯೋ ಅದೇ ರೀತಿ ನಾನಾ ಕ್ಷೇತ್ರಗಳಲ್ಲಿ ಇವತ್ತಿನ ವರೆಗೂ ಅಡ್ಡ ಬರುತ್ತವೆ. ಹೀಗಾಗದಂತೆ ನಾವು ಎಚ್ಚರ ವಹಿಸಬೇಕು, ಮೂಢನಂಬಿಕೆಗಳು ನಮ್ಮ ಜೀವನಕ್ಕೆ ಹಾಸುಹೊಕ್ಕಾಗಿರಬೇಕು ಎಂದು ಶ್ರೀ ರಾ.ಯ.

ಧಾರವಾಡಕರರು 'ಧೂಮ್ರವಲಯಗಳು' ಎಂಬ ಪುಸ್ತಕದಲ್ಲಿ ಚೆನ್ನಾಗಿ ಮನದಟ್ಟಣೆ ಮಾಡಿಕೊಂಡಿದ್ದಾರೆ. ಆದರೆ ನಮ್ಮ ಪ್ರಸ್ತುತ ವಿಷಯದಲ್ಲಿ ಕುಟುಂಬ ಯೋಜನೆಯು ವಿಫಲವಾಗಲು ಮೂಢನಂಬಿಕೆಗಳು ಕಾರಣವಾಗಿದ್ದು, ಅವುಗಳನ್ನು ಹೋಗಲಾಡಿಸಲು ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಜನರಿಗೆ ಪ್ರೌಢ ಶಿಕ್ಷಣ (Adult education) ಒದಗಿಸಿ ಅವರಲ್ಲಿ ಬೇರೂರಿದ ಮೂಢನಂಬಿಕೆಗಳನ್ನು ಕಿತ್ತುಹಾಕಿ ಕುಟುಂಬ ಯೋಜನೆಯನ್ನು ಯಶಸ್ವಿ ಮಾಡುವದೇ ನಮ್ಮ ಸರಕಾರದ ಗುರಿಯಾಗಿದೆ. ಅದರಂತೆ ಈಗ ನಮ್ಮ ಸರಕಾರ ಇತ್ತೀಚೆಗೆ ಎರಡೇ ಮಕ್ಕಳಿದ್ದ ಉದ್ಯೋಗಸ್ಥರಿಗೆ ಒಂದು ಇನ್‌ಕ್ರಿಮೆಂಟ ಕೊಡಮಾಡಲಾಗುವದೆಂದು ಘೋಷಿಸಿದೆ. ಇದಕ್ಕಿಂತ ಸರಕಾರ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಲಕ್ಷವಹಿಸಿ ಹಲವಾರು ಕೊಡುಗೆಗಳ ಆಕರ್ಷಣೆಯಿಂದ ಕುಟುಂಬ ಯೋಜನೆ ಹೆಚ್ಚು ಫಲಕಾರಿಯಾಗುವಂತೆ ಪ್ರಯತ್ನಿಸಬೇಕು. ಯಾಕೆಂದರೆ ಪಟ್ಟಣ ಹಾಗೂ ಉದ್ಯೋಗಸ್ಥ ಪುರುಷ ಹಾಗೂ ಸ್ತ್ರೀಯರು ಸಾಮಾನ್ಯವಾಗಿ ಚಿಕ್ಕ ಕುಟುಂಬ ಹೊಂದಿದವರಿರುತ್ತಾರೆ ಇಲ್ಲವೆ ಹೊಂದಲು ಇಚ್ಛೆಯುಳ್ಳವರಾಗಿರುತ್ತಾರೆ. ಆದಕ್ಕಾಗಿ ನಮ್ಮ ದೇಶದಲ್ಲಿ ಯಾವದೇ ಯೋಜನೆಗಳು ಗ್ರಾಮೀಣ ಪ್ರದೇಶದಲ್ಲಿ ಯಶಸ್ವಿಯಾದರೆ ದೇಶ ಆರ್ಥಿಕ ಪ್ರಗತಿಯನ್ನು ತ್ವರಿತ ಗತಿಯಲ್ಲಿ ಸಾಧಿಸಲು ಸಹಾಯವಾಗುವದು. ಕೇವಲ ನಿರಕ್ಷರತೆ ನಿರ್ಮೂಲನೆ ಮಾಡಿದರೆ ಸಾಲದು. ಇದರ ಜೊತೆಗೆ ಬಡತನ, ಮೂಢನಂಬಿಕೆ, ನಿರುದ್ಯೋಗ, ಸಾಮಾಜಿಕ ಹಾಗೂ ಆರ್ಥಿಕ ಹಿಂದುಳಿಕೆ

ಇವೆಲ್ಲವುಗಳನ್ನು ನಿರ್ಮೂಲನ ಮಾಡದ ಹೊರತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ನಿರೀಕ್ಷಿತ ಫಲ ನೀಡುವದಿಲ್ಲ. ಆದುದರಿಂದ ಸರಕಾರವು ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾದುದು ಅವಶ್ಯಕ ಇಂಥಹ ಕಾರ್ಯಕ್ರಮಗಳಿಗೆ ಅಕ್ಷರಸ್ಥರು ಮತ್ತು ನಿರಕ್ಷರಸ್ಥರೆಲ್ಲರೂ ತಲೆಬಾಗಬೇಕಾದುದು ಅಷ್ಟೇ ಅವಶ್ಯಕ. ಇದಕ್ಕಾಗಿ ಭಾರತ ಸರಕಾರ ಹಾಗೂ ಭಾರತೀಯ ಪ್ರಜೆಗಳಾದ ನಾವೆಲ್ಲರೂ ಸ್ವಯಂಪ್ರೇರಿತರಾಗಿ ಮುಂದೆ ಬಂದು ಇಂತಹ ಜಟಿಲವಾದ ಸಮಸ್ಯೆಯನ್ನು ಹೋಗಲಾಡಿಸಲು ಪ್ರಯತ್ನಿಸಬೇಕು. ಅಂದರೆ ಮಹಾತ್ಮಾ ಗಾಂಧೀಜಿಯವರು ಕಂಡ ರಾಮರಾಜ್ಯದ ಕನಸು ನನಸಾಗುವದರಲ್ಲಿ ಯಾವ ಸಂಶಯವಿಲ್ಲ. ಈಗ ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡೂ ಈ ಸಮಸ್ಯೆಯ ಪರಿಹಾರಕ್ಕಾಗಿ ಅಪಾರ ಹಣವನ್ನು ವೆಚ್ಚ ಮಾಡುವದರ ಜೊತೆಗೆ ವಿವಿಧ ಹಂತಗಳಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ಇದಕ್ಕಾಗಿ ಏಳನೆಯ ಯೋಜನೆಗಳಲ್ಲಿ ಎಲ್ಲದಕ್ಕಿಂತ ಇದಕ್ಕೆ ಅತ್ಯಂತ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಇಷ್ಟೆಲ್ಲಾ ಪ್ರಯತ್ನ ನಡೆದಿದ್ದರಿಂದ ಸ್ವಲ್ಪ ಮಟ್ಟಿಗಾದರೂ ನಮ್ಮ ಗುರಿಯನ್ನು ತಲುಪಬಹುದೆಂಬ ಆಶಾಕಿರಣವನ್ನು ಹೊಂದಿದ್ದೇವೆ, ಅದಕ್ಕಾಗಿ ನಮ್ಮ ಸರಕಾರ ಕುಟುಂಬ ಯೋಜನೆಯ ಯಶಸ್ವಿಗೆ ಎರಡನೇ ಯೋಜನೆಯ ಅವಧಿಯಲ್ಲಿ ಕಾನಪೂರದಲ್ಲಿ ಗರ್ಭ ನಿರೋಧಕಗಳನ್ನು (Condoins) ಉತ್ಪಾದಿಸಲು ಒಂದು' ಕಾರಖಾನೆಯನ್ನು ಸ್ಥಾಪಿಸಿತು. ೧೯೬೫ ರಲ್ಲಿ 'ವಂಕಿಧಾರಣ

ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಯಿತು. ಇನ್ನು ನಾಲ್ಕನೆಯ ಯೋಜನೆಯಲ್ಲಿ 'ಕೇಂದ್ರ ಕುಟುಂಬ ಯೋಜನಾ ಮಂಡಳಿ (Central Family planning Council) ಯನ್ನು ಸ್ಥಾಪಿ ಲಾಯಿತು. ೧೯೭೭ ರಲ್ಲಿ ಜನತಾ ಪಕ್ಷವು ಕೇಂದ್ರದಲ್ಲಿ ಸರಕಾ ರಚಿಸಿದಾಗ 'ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ಕುಟುಂ ಕಲ್ಯಾಣ ಕಾರ್ಯಕ್ರಮ' ಎಂದು ಹೆಸರಿಟ್ಟಿತು. ೧೯೮೦ ಜನೆವರಿ ತಿಂಗಳಲ್ಲಿ ಮತ್ತೆ ಕಾಂಗ್ರೆಸ್ (ಐ) ಪಕ್ಷವು ಕೇಂದ್ರದ ಸರಕಾರವನ್ನು ರಚಿಸಿದ ನಂತರ, ಕುಟುಂಬ ಯೋಜನಾ ಕಾರ್ಯ ಕ್ರಮವನ್ನು ತೀವ್ರಗೊಳಿಸಲು ನಿರ್ಧರಿಸಿತು. ಆಗಿನ ಪ್ರಧಾ ಮಂತ್ರಿಗಳಾದ ಶ್ರೀ ರಾಜೀವ ಗಾಂಧಿಯವರು ಈ ಕುಟುಂ ಕಲ್ಯಾಣಕ್ಕೆ ಸಾಕಷ್ಟು ಆದ್ಯತೆ ನೀಡಿದ್ದರಿಂದ ಸ್ವಲ್ಪ ಮಟ್ಟಿ ಜನಸಂಖ್ಯೆಯನ್ನು ಕಡಿಮೆಯಾಗಿಡಲು ನಾವು ಯಶಸ್ವಿಯಾ ದ್ದೇವೆ.

———

ಗ್ರಂಥ ಋಣ

೧ ಭಾರತದ ಅರ್ಥಶಾಸ್ತ್ರ – ಪ್ರೊ. ಎಸ್. ಎಮ್. ನರಗುಂ
೨ ಕುಟುಂಬ ಕಲ್ಯಾಣ ಸಮೀಕ್ಷೆ
–(ಭಾರತ ಸರಕಾರದ ಪ್ರಕಟಣ

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ